


ಕರ್ನಾಟಕ ಸ್ಕೌಟ್ ಮತ್ತು ಗೈಡ್
ತಿಂಗಳ ವಾರ್ತಾಪತ್ರಿಕೆ

# Karnataka Scout & Guide
Monthly News Magazine

Vol -20 | Issue-07 | JULY 2023 | ₹ 10/-




ಆಗಸ್ಟ್ 01 ರಿಂದ 08ರ ವರೆಗೆ ದಕ್ಷಿಣ ಕೊರಿಯಾದಲ್ಲಿ ನಡೆಯಲಿರುವ 25ನೇ ವಿಶ್ವ ಜಾಂಬೂರಿಯಲ್ಲಿ ಭಾರತ ದೇಶದ ಪ್ರತಿನಿಧಿಗಳಾಗಿ ಕರ್ನಾಟಕ ರಾಜ್ಯದ ಬೆಂಗಳೂರು ದಕ್ಷಿಣ, ದಾವಣಗೆರೆ, ಮೈಸೂರು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಒಟ್ಟು 124 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳನಾಯಕರುಗಳು ಭಾಗವಹಿಸುತ್ತಿದ್ದಾರೆ.

ಅಂತರಾಷ್ಟ್ರೀಯ ಉಪ ಆಯುಕ್ತರಾದ ಶ್ರೀ ಎ.ಎಸ್. ಮಧುಸೂದನ್, ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಕೆ. ಖಾನ್, ದಕ್ಷಿಣ ಕನ್ನಡ ಜಿಲ್ಲೆ ಭಂಟ್ವಾಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎಂ. ತುಂಬೆ ಅವರೂ ಸಹ ಭಾಗವಹಿಸುತ್ತಿದ್ದಾರೆ. ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಎ. ಖಾಲೀದ್ ಮತ್ತು ಇತರೆ ರಾಜ್ಯ ಪದಾಧಿಕಾರಿಗಳು ಹಾಗೂ ಇತರರು ಶುಭಾಶಯಗಳನ್ನು ಕೋರಿದರು.



ಮಾನ್ಯ ಶ್ರೀ ಈಶ್ವರ ಬಿ. ಖಂಡ್ರೆ, ಅರಣ್ಯ ಮತ್ತು ಪರಿಸರ ಸಚಿವರು ಕರ್ನಾಟಕ ಸರಕಾರ ಇವರನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಜುಲೈ 04 ರಂದು ಭೇಟಿ ಮಾಡಿ ರಾಜ್ಯ ಸಂಸ್ಥೆಯ ವತಿಯಿಂದ ನಡೆಸುವ ಪರಿಸರಕ್ಕೆ ಸಂಭಂದಿಸಿದ ಚಟುವಟಿಕೆಗಳಿಗೆ ಇಲಾಖೆಯ ವತಿಯಿಂದ ಸಹಕಾರವನ್ನು ನೀಡುವಂತೆ ವಿನಂತಿಸಿದರು. ಇಲಾಖೆಯ ಅಧಿಕಾರಿಗಳಾದ ಶ್ರೀ ರಾಜೀವ್ ರಂಜನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರು, ಶ್ರೀ ರಾಜಕುಮಾರ್ ಶ್ರೀವಾಸ್ತವ್, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ರಾಜ್ಯ ಸಹಾಯಕ ಆಯುಕ್ತರಾದ ಶ್ರೀ ಮೋಹನ್ ಕೊಂಡಜ್ಜಿ, ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಕೆ.ಹೆಚ್. ಜಯರಾಮಯ್ಯ, ರಾಜ್ಯ ಸಂಘಟನಾ ಆಯುಕ್ತರುಗಳಾದ ಶ್ರೀ ಎಂ. ಪ್ರಭಾಕರ ಭಟ್, ಶ್ರೀಮತಿ ಸಿ. ಮಂಜುಳ ಇವರುಗಳು ಉಪಸ್ಥಿತರಿದ್ದರು. ಗಿಡಗಳನ್ನು ಉಚಿತವಾಗಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೀಡಲು, ಚಿಣ್ಣರ ವನದರ್ಶನ ಕಾರ್ಯಕ್ರಮದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ಅವಕಾಶ ನೀಡಲು ಸಚಿವರು ಒಪ್ಪಿಗೆ ಸೂಚಿಸಿದರು.



ಜುಲೈ 08 ರಂದು ತುಮಕೂರು ಜಿಲ್ಲಾ ಸಂಸ್ಥೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 2022-23ನೇ ಸಾಲಿನ ಎಸ್.ಎಸ್.ಎಲ್.ಸಿ.ಯಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಅಂಕಗಳಿಸಿದ ಸ್ಕೌಟ್ಸ್-ಗೈಡ್ಸ್‌ಗಳನ್ನು ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷಾ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ರೋವರ್ಸ್-ರೇಂಜರ್ಸ್‌ಗಳನ್ನು ಜಿಲ್ಲಾ ಸಂಸ್ಥೆಯಿಂದ ಗೌರವಿಸಿ ಪ್ರಮಾಣ ಪತ್ರಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಜಿಲ್ಲಾ ಮುಖ್ಯ ಆಯುಕ್ತೆ ಮತ್ತು ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ಆಶಾ ಪ್ರಸನ್ನಕುಮಾರ್, ಜಿಲ್ಲಾ ಆಯುಕ್ತರುಗಳಾದ ಶ್ರೀ ಬಿ.ಆರ್. ವೇಣುಗೋಪಾಲಕೃಷ್ಣ, ಶ್ರೀಮತಿ ಸುಭಾಷಿಣಿ ಆರ್. ಕುಮಾರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಂದ್ರ ಷಾ ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 | Issue : 07 | July 2023

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಹೊಸ ವ್ಯವಸ್ಥೆ ...05
ಪದವಿ ಪೂರ್ವ ಉಪನ್ಯಾಸಕರುಗಳಿಗೆ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರ ...06
ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರಗಳು ...08
ವಿಭಾಗೀಯ ಮಟ್ಟದ ಮುಂದುವರೆದ ತರಬೇತಿ ಶಿಬಿರಗಳು ...10
Sri M.A. Chellaiah 80th Year Birth Day Celebration ...13
ಆಗಸ್ಟ್ 2023ರ ಕಾರ್ಯಕ್ರಮಗಳು ...15
ಜಿಲ್ಲಾ ವಾರ್ತೆಗಳು ...16
ಒಂದಾಗಿ ಚಂದಾಗಿ ಬದುಕೋಣ ...32
ಬಂಧನ ಬದುಕಿನಲ್ಲಿರುವವರೊಂದಿಗೆ ಯೋಗ ...34



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

2023-24ನೇ ಸಾಲಿನ ಶಾಲಾ ಶೈಕ್ಷಣಿಕ ಚಟುವಟಿಕೆಗಳು ಎರಡನೇ ತಿಂಗಳಿಗೆ ಕಾಲಿಟ್ಟಿವೆ. ನಮ್ಮ "ವಾರ್ಷಿಕ ಕಾರ್ಯಕ್ರಮಗಳ ಯೋಜನೆ 2023-24" ಪುಸ್ತಕದಲ್ಲಿನ ವೇಳಾಪಟ್ಟಿಗನುಗುಣವಾಗಿ, ಶಿಬಿರಗಳು ಮತ್ತು ಕಾರ್ಯಕ್ರಮಗಳೆಲ್ಲವೂ ಯೋಜಿತ ರೀತಿಯಲ್ಲಿ ನಡೆಯುತ್ತಿವೆ. ಇದು ಸಂತೋಷದ ವಿಚಾರ.

ಜುಲೈ ತಿಂಗಳಿನಲ್ಲಿ, ರಾಜ್ಯಾದ್ಯಂತ ನಮ್ಮ ಸಂಸ್ಥೆಯ ತರಬೇತಿ ಶಿಬಿರಗಳು ಯಶಸ್ವಿಯಾಗಿ ನಡೆಯುತ್ತಿವೆ. ಮೈಸೂರು, ಬೆಳಗಾವಿ, ರಾಯಚೂರು ಮತ್ತು ಬೆಂಗಳೂರಿನಲ್ಲಿ ವಿಭಾಗಮಟ್ಟದ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ರೋವರಿಂಗ್-ರೇಂಜರಿಂಗ್ ಬಗ್ಗೆ ನಡೆದ ಮಾಹಿತಿ ಶಿಬಿರಗಳಲ್ಲಿ 1200ಕ್ಕೂ ಹೆಚ್ಚು ಉಪನ್ಯಾಸಕರುಗಳು ಭಾಗವಹಿಸಿದ್ದಾರೆ. ರೋವರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ನಡೆದ ಪ್ರಾಥಮಿಕ ಮತ್ತು ಅಡ್ವಾನ್ಸ್ ತರಬೇತಿ ಶಿಬಿರಗಳಲ್ಲಿ ಸುಮಾರು 400 ಶಿಕ್ಷಕರು ಭಾಗವಹಿಸಿದ್ದಾರೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಶಿಕ್ಷಕರುಗಳಿಗೆ ಕೊಪ್ಪಳದಲ್ಲಿ ಹಾಗೂ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಧಾರವಾಡ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸ್ಕೌಟ್ಸ್-ಗೈಡ್ಸ್, ಕಬ್ ಬುಲ್‌ಬುಲ್ ಶಿಕ್ಷಕಿಯರ ಪ್ರಾಥಮಿಕ ತರಬೇತಿ ಶಿಬಿರಗಳು ಯಶಸ್ವಿಯಾಗಿ ನಡೆದಿವೆ.

ದೊಡ್ಡಬಳ್ಳಾಪುರ, ಕೊಂಡಜ್ಜಿ, ಉಡುಪಿ, ಮಂಗಳೂರು, ರಾಯಚೂರು, ಬಳ್ಳಾರಿ, ಧಾರವಾಡ, ವಿಜಯಪುರ, ಕಲಬುರಗಿ ಜಿಲ್ಲೆಗಳಲ್ಲಿ ಸಂಘಟಿಸಲಾಗಿದ್ದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಗೈಡ್ಸ್ ಪರಿಕ್ಷಾ ಶಿಬಿರಗಳಲ್ಲಿ 2500 ವಿದ್ಯಾರ್ಥಿಗಳು ಭಾಗವಹಿಸಿರುವುದು ಹೆಮ್ಮೆಯ ವಿಚಾರ.

ಈ ತರಬೇತಿ ಶಿಬಿರಗಳು ನಿರಂತರವಾಗಿ ನಡೆಯಲು ಸಹಕಾರ ನೀಡಿದ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಗೆ ನಮ್ಮ ಸಂಸ್ಥೆ ಆಭಾರಿಯಾಗಿದೆ. ವಿಶೇಷವಾಗಿ ತರಬೇತಿ ಶಿಬಿರಗಳ ಆಯೋಜನೆಗೆ ಹೆಚ್ಚಿನ ಆಸಕ್ತಿ ತೋರಿ ಸಹಕಾರ ನೀಡಿದ ಶ್ರೀ ಗುಬ್ಬಿ ಗೂಡು ರಮೇಶ್, ಸಹಾಯಕ ನಿರ್ದೇಶಕರು, ಪ.ಪೂ.ಶಿ.ಇಲಾಖೆ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಇನ್ನು ಪ್ರತಿಫಲ ಅಪೇಕ್ಷೆಗಳಿಲ್ಲದೆ ಶಿಬಿರಗಳಲ್ಲಿ ಭಾಗವಹಿಸಿದ್ದ ಉಪನ್ಯಾಸಕರುಗಳಿಗೆ, ಶಿಕ್ಷಕ-ಶಿಕ್ಷಕಿಯರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ, ಪೋಷಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೆ ನನ್ನ ಕೃತಜ್ಞತೆಗಳು.

ಸರ್ಕಾರ ಮತ್ತು ಸಾರ್ವಜನಿಕರಿಗೆ ನಮ್ಮ ಸಂಸ್ಥೆಯ ಮೇಲೆ ಭರವಸೆ ಹೆಚ್ಚಾಗತೊಡಗಿದೆ. ಪ್ರಸಕ್ತ ಕಾಲಘಟ್ಟದಲ್ಲಿ ಯಾವುದೇ ತರಬೇತಿಗಳು ಬೇಡಿಕೆಗೆ ತಕ್ಕಂತೆ, ಪರಿಸ್ಥಿತಿಗನುಗುಣವಾಗಿ ಇರಬೇಕಾಗುತ್ತವೆ ಈ ಹಿನ್ನೆಲೆಯಲ್ಲಿ, ನಮ್ಮ ತರಬೇತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಇನ್ನೂ ಉತ್ತಮಗೊಳಿಸಲು ಆಧುನಿಕತೆಯ ಬದಲಾವಣೆಗೆ ಅನುಗುಣವಾಗಿ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ, ಸಾಮಾಜಿಕ ಜಾಲತಾಣಗಳ ಮತ್ತು ತಂತ್ರಜ್ಞಾನಗಳ ಬಳಕೆಗಳತ್ತ ನಾವೆಲ್ಲರೂ ಗಮನಹರಿಸೋಣ ಎಂಬುದು ನನ್ನ ಅನಿಸಿಕೆ. ಇದರ ಬಗ್ಗೆ ನಾವೆಲ್ಲರೂ ಸಂಘಟಿತರಾಗಿ ಪ್ರಯತ್ನಿಸೋಣ.

ನಮ್ಮ ಸಂಸ್ಥೆಯ ಮುಖ್ಯ ಆಯುಕ್ತರಾಗಿದ್ದ ಮೇಜರ್ ಡಾ॥ ವೈ.ವಿ.ಕೆ. ಮೂರ್ತಿ ಹಾಗೂ ರಾಜ್ಯದಲ್ಲಿ ಸ್ಕೌಟ್-ಗೈಡ್ ಚಳವಳಿ ಹೆಚ್ಚಿಸಲು ಉತ್ತೇಜನ ನೀಡಿದ ಮೈಸೂರು ಸಂಸ್ಥಾನದ ರಾಜವಂಶಸ್ಥರೂ ಹಾಗೂ ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ದಿವಂಗತ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರುಗಳ ಹುಟ್ಟುಹಬ್ಬ ಆಚರಣೆಗಳನ್ನು ರಾಜ್ಯ ಮಟ್ಟದಲ್ಲಿ ವೆಬಿನಾರ್‌ಗಳ ಮೂಲಕ ಯಶಸ್ವಿಯಾಗಿ ಆಚರಿಸಲಾಗಿದೆ. ರಾಜ್ಯಾದ್ಯಂತ ಕಾರ್ಗಿಲ್ ವಿಜಯ ದಿವಸವನ್ನು ಎಲ್ಲರೂ ಅರ್ಥಪೂರ್ಣವಾಗಿ ಆಚರಿಸಿದ್ದಾರೆ. ಚಾಮರಾಜನಗರ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ಎಂ.ಎಂ. ಹಿಲ್ಸ್‌ನಲ್ಲಿ ಪ್ರಕೃತಿ ಅಧ್ಯಯನ ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಲಾಗಿತ್ತು.

ಭಾರತದ ಬಹು ನಿರೀಕ್ಷಿತ ಚಂದ್ರಯಾನ 3ನ್ನು ಜುಲೈ 14 ರಂದು ಶ್ರೀ ಹರಿಕೋಟಾದ **'ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ'**ದಿಂದ ಯಶಸ್ವಿಯಾಗಿ ಉಡಾವಣೆಗೊಂಡಿದ್ದು, ನಭಕ್ಕೆ ಜಿಮ್ಮಿದ ಚಂದ್ರಯಾಣ ನೌಕೆಯು ಮೂರು ಹಂತ ದಾಟ ನಿಗದಿತ ಕಕ್ಷೆ ಸೇರುವಲ್ಲಿಯೂ ಯಶಸ್ವಿಯಾಗಿದೆ. ಈ ಅಸಾಧಾರಣ ಮತ್ತು ಅಭೂತಪೂರ್ವ ಯಶಸ್ಸಿಗೆ ಕಾರಣರಾದ ಇಸ್ರೋ ಸಂಸ್ಥೆಯ ಎಲ್ಲಾ ಹೆಮ್ಮೆಯ ವಿಜ್ಞಾನಿಗಳಿಗೆ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯಿಂದ ಹಾರ್ದಿಕ ಅಭಿನಂದನೆಗಳು.

ಸ್ಕೌಟ್ಸ್-ಗೈಡ್ಸ್ ಮಾಸಪತ್ರಿಕೆಯು 100 ವರ್ಷಗಳನ್ನು ಪೂರೈಸುವ ಮೂಲಕ ನಮ್ಮ ಸಂಸ್ಥೆ ಒಂದು ಅದ್ಭುತ ಸಾಧನೆ ಮಾಡಿದೆ. ಈ ಹೆಮ್ಮೆಯ ಸಂಭ್ರಮವನ್ನು ಒಂದು ವಿಶಿಷ್ಟ ಮತ್ತು ಅರ್ಥಪೂರ್ಣವಾಗಿ ಆಚರಿಸಲಿದ್ದೇವೆ. ಇದೊಂದು ಅಸಾಧಾರಣ ಸಾಧನೆ. ಇಷ್ಟು ವರ್ಷಗಳ ಕಾಲ ಈ ಪತ್ರಿಕೆಯ ಉಳಿವಿಗೆ ಪ್ರತ್ಯಕ್ಷ-ಪರೋಕ್ಷ ಕಾರಣರಾದವರೆಲ್ಲರಿಗೂ ಧನ್ಯವಾದಗಳು.

ರಾಜ್ಯದಲ್ಲಿ ಮುಂಗಾರು ಮಳೆಯ ಆರ್ಭಟ ಹೆಚ್ಚಾಗಿದೆ. ಅನೇಕ ಜಿಲ್ಲೆಗಳಲ್ಲಿ ಭಾರಿ ಪ್ರಮಾಣದ ಮಳೆಯಾಗುತ್ತಿದೆ. ಹವಾಮಾನ ಇಲಾಖೆಯ ಪ್ರಕಟಣೆಗಳ ಪ್ರಕಾರ ಜುಲೈ, ಆಗಸ್ಟ್‌ನಲ್ಲಿ ಮಳೆಯು ಹೆಚ್ಚಾಗಲಿದ್ದು, ಹೊರಾಂಗಣ ಚಟುಟಕೆಗಳಲ್ಲಿ ತೊಡಗುವ ನಮ್ಮ ಎಲ್ಲ ಮಕ್ಕಳು ಮತ್ತು ಶಿಕ್ಷಕರು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಿರಿ ಮತ್ತು ಜಾಗೃತರಾಗಿರಿ.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

"ಆಹಾರವನ್ನು ವ್ಯರ್ಥ ಮಾಡದೆ,
ಅದನ್ನು ಗೌರವದಿಂದ ಪರಿಗಣಿಸೋಣ"

# ಹೊಸ ವ್ಯವಸ್ಥೆ

**ನಾಡೋಜ ಡಾ. ಗೊ.ರು. ಚೆನ್ನಬಸಪ್ಪ**
ಗೌರವಾಧ್ಯಕ್ಷರು
ಪ್ರಕಟಣೆಗಳ ಸಮಿತಿ, ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ

ಒಮ್ಮೆ ಓಷೋ ಅವರನ್ನು ಯಾರೋ ಒಬ್ಬ 'ಇಂದಿನ ಯುವಕರು ಯಾಕೆ ಬಂಡಾಯ ಸ್ವಭಾವದವರಾಗಿದ್ದಾರೆ?' ಎಂದು ಕೇಳಿದ ಪ್ರಶ್ನೆಗೆ ಓಷೋ ಕೊಟ್ಟ ಉತ್ತರವೇ ಈ ಚಿಂತನ. ಆ ಉತ್ತರ ವಸ್ತುನಿಷ್ಠವಾಗಿದ್ದು ನಾವು ಮುಕ್ತ ಮನಸ್ಸಿನಿಂದ ಅವರು ಕೊಟ್ಟ ಕಾರಣಗಳನ್ನು ಗಮನಿಸಬೇಕು. ಯುವ ಜನಾಂಗದ ಬಂಡಾಯಕ್ಕೆ ಓಷೋ ನಾಲ್ಕು ಕಾರಣಗಳನ್ನು ಕೊಡುತ್ತಾರೆ. ಅವುಗಳಲ್ಲಿ ಇಂದಿನ ಸಾರ್ವತ್ರಿಕ ಅಥವಾ ಸರ್ವಾನ್ವಯದ ಶಿಕ್ಷಣ ವ್ಯವಸ್ಥೆ ಒಂದು ಕಾರಣ. ಈಗ ವಿಶ್ವದ ಯುವಜನ ಹೊಸ ರೀತಿಯ ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಿತ ಮನಸ್ಸಿಗೆ ಹಳೆಯ ವ್ಯವಸ್ಥೆ ಅಸಂಬದ್ಧವಾಗಿ ಮತ್ತು ಅಪ್ರಸ್ತುತವಾಗಿ ಕಾಣುತ್ತದೆ.

ಎರಡನೆಯದಾಗಿ, ಈಗ ವಿಶ್ವದಲ್ಲಿ ಆಗುತ್ತಿರುವ ವೈಜ್ಞಾನಿಕ ಪ್ರಗತಿ ಮತ್ತು ಯುವಜನರಿಗೆ ದೊರೆಯುತ್ತಿರುವ ವೈಜ್ಞಾನಿಕ ತರಬೇತಿ. ಆದರೂ ಯುವಕರು ಮೂಲಭೂತವಾಗಿ ಈ ತರಬೇತಿಯನ್ನೇ ಸಂಶಯದಿಂದ ನೋಡುತ್ತಾರೆ. ಏಕೆಂದರೆ, ಎಲ್ಲ ಹಳೆಯ ಸಂಸ್ಕೃತಿಗಳು ಮತ್ತು ನಾಗರಿಕತೆಗಳು ನಂಬಿಕೆಯನ್ನು ಆಧರಿಸಿವೆ. ಈ ಸಂಶಯ ಮತ್ತು ನಂಬಿಕೆಗಳ ಮಧ್ಯೆ ಒಂದು ಅಂತರವಿದೆ. ಯುವಜನ ತರಬೇತಾಗಿರುವುದೇ ಈ ಸಂಶಯಕ್ಕಾಗಿ. ಆದರೆ ಧರ್ಮ ಮತ್ತು ಸಂಸ್ಕೃತಿಗಳಿಗೆ ಬೇಕಾಗಿರುವುದು ನಂಬಿಕೆ. ಹೀಗಾಗಿ ಅವೆರಡೂ ಒಂದಕ್ಕೊಂದು ಹೊಂದಿಕೊಳ್ಳುವುದು ಅಸಾಧ್ಯವಾಗಿದೆ. ಯುವಕರು ವಾಸ್ತವವಾಗಿ ಈ ನಂಬಿಕೆಯನ್ನೇ ಹುಡುಕುತ್ತಿದ್ದಾರೆ. ಆದರೆ ಅದು ವೈಜ್ಞಾನಿಕವಾಗಿರಬೇಕೆಂಬುದು ಅವರ ನಿಲುವು. ಅವರು ಹುಡುಕುವ ನಂಬಿಕೆ ಹೇಗಿರಬೇಕೆಂದರೆ, ಅದರಲ್ಲಿ ಸಂಶಯಕ್ಕೆ ಅವಕಾಶವಿರಬೇಕು. ಆ ನಂಬಿಕೆಗೆ ಸಂಶಯದ ಹೆದರಿಕೆ ಇರಬಾರದು.

ಬದುಕು ಸರಳವಾದುದಲ್ಲ; ಸಂಕೀರ್ಣವಾದದ್ದು. ಬದುಕಿನ ಪ್ರತಿಯೊಂದೂ ಪರಸ್ಪರ ವಿರುದ್ಧವಾಗೇ ಇರುತ್ತದೆ. ವಿಜ್ಞಾನ ಸಂಶಯದಿಂದ ಆರಂಭವಾಗಿ ನಂಬಿಕೆಯಲ್ಲಿ ಕೊನೆಗೊಳ್ಳುತ್ತದೆ. ಅದೇ ಧರ್ಮ ನಂಬಿಕೆಯಿಂದ ಆರಂಭವಾಗುತ್ತದೆ. ವಿಜ್ಞಾನ ಮತ್ತು ಧರ್ಮಗಳ ವ್ಯತ್ಯಾಸವಿಷ್ಟೆ. ವಾಸ್ತವವಾಗಿ, ಸಂಶಯದಿಂದ ಆರಂಭವಾದ ನಂಬಿಕೆ ಗಾಢವಾಗಿರುತ್ತದೆ. ಏಕೆಂದರೆ ಅದಕ್ಕೆ ಸಂಶಯದ ಭಯವಿರುವುದಿಲ್ಲ.

ಸಂಶಯ ನಂಬಿಕೆಯ ವಿರುದ್ಧವಾದುದೇನೂ ಅಲ್ಲ. ಅದು ನಂಬಿಕೆಯ ಒಂದು ಮಾರ್ಗ. ಅದನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳಬಹುದು. ನಮ್ಮ ಸಂಶಯ ಸರಿಯಾಗಿದ್ದರೆ, ನಾವು ನಂಬಿಕೆಯ ಮೇಲೆ ಇರುತ್ತೇವೆ. ಆಗ ನಮ್ಮ ನಂಬಿಕೆಗೆ ದೃಢವಾದ ನೆಲೆಯಿರುತ್ತದೆ. ಅದು ಕುರುಡು ನಂಬಿಕೆ ಅಥವಾ ಮೂಢ ನಂಬಿಕೆ ಆಗುವುದಿಲ್ಲ.

ಮೂರನೆಯದಾಗಿ, ಈಗ ಇಡೀ ಜಗತ್ತು ಒಂದಾಗುತ್ತಿರುವುದು. ಅದು ಎಷ್ಟು ಹತ್ತಿರವಾಗಿದೆಯೆಂದರೆ, ಸ್ಥಳೀಯ ಸಂಸ್ಕೃತಿಗಳು ಇನ್ನು ಹೆಚ್ಚು ಕಾಲ ಮುಂದುವರಿಯಲು ಸಾಧ್ಯವಿಲ್ಲ ಎನ್ನುವಷ್ಟು. ನಮಗೆ ಬೇಕಾಗಿರುವುದು ಒಂದು ಸಂಸ್ಕೃತಿ; ಒಂದು ನಾಗರಿಕತೆ ನಿಜ. ಆದರೆ ಇಂದು ಇರುವ ಅನೇಕ ಸಂಸ್ಕೃತಿಗಳು ಮತ್ತು ನಾಗರಿಕತೆಗಳಿಂದಾಗಿಯೇ ಗೊಂದಲವುಂಟಾಗಿದೆ. ಇರುವ ಮತ್ತು ಬರುವ ಎರಡರ ಮಧ್ಯೆ ಘರ್ಷಣೆ ನಡೆದಿದೆ.

ಒಂದು ಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಸ್ಥಳೀಯ ಜಗತ್ತಿನಲ್ಲಿ ಇದ್ದು ಬಿಟ್ಟಿದ್ದ. ಹಿಂದೂ ಹಿಂದುವಾಗಿ, ಮುಸ್ಲಿಂ ಮುಸ್ಲಿಮನಾಗಿ, ಕ್ರೈಸ್ತನಾಗಿ, ಜೈನ ಜೈನನಾಗಿ, ಬೌದ್ಧ ಬೌದ್ಧನಾಗಿ – ಹೀಗೆ ತಮ್ಮ ತಮ್ಮ ಆಯಕಟ್ಟಿನಲ್ಲೇ ಇದ್ದು ಬೇರೊಂದರ ಬಗೆಗೆ ಅವರಿಗೆ ಅರಿವೇ ಇರಲಿಲ್ಲ. ಇದಕ್ಕೆ ಪರ್ಯಾಯ ಮಾರ್ಗವಿದೆ ಎಂಬುದನ್ನು ಊಹಿಸಲೂ ಸಾಧ್ಯವಿರಲಿಲ್ಲ. ಆದರೆ ಈಗ ನಮಗೇ ಅನೇಕ ಪರ್ಯಾಯ ಪಥಗಳ ಪರಿಚಯವಾಗಿದೆ. ಜಗತ್ತು ಈಗ ಮುಕ್ತ ಜಗತ್ತಾಗಿದೆ. ಪ್ರತ್ಯೇಕತೆಯ ಗೋಡೆಗಳು ಮುರಿದುಬಿಟ್ಟಿವೆ. ಈಗ ಯಾರೂ ಸ್ಥಳೀಯ ಸಂಸ್ಕೃತಿಯನ್ನೇ ಅವಲಂಬಿಸಿಲ್ಲ. ಇದು ಒಂದು ರೀತಿಯ ಅಶಾಂತಿಯನ್ನು ಸೃಷ್ಟಿಸಿದೆ. ನಮ್ಮ ಇಡೀ ವ್ಯವಸ್ಥೆಯೇ ತಲೆಕೆಳಗಾದಂತಿದೆ. ನಾವೀಗ ವಿಶ್ವ ಸಂಸ್ಕೃತಿಯನ್ನು ನಿರ್ಮಿಸಬೇಕಾಗಿದೆ.

ಆದರೆ ಆ ವಿಶ್ವ ಸಂಸ್ಕೃತಿ ಅಸ್ತಿತ್ವಕ್ಕೆ ಬರಬೇಕಾದರೆ ಸ್ಥಳೀಯ ಸಂಸ್ಕೃತಿಗಳು ಸ್ಥಳ ಬಿಟ್ಟುಕೊಡಬೇಕಾಗುತ್ತದೆ. ಆದ್ದರಿಂದಲೇ ಇಂದಿನ ಯುವಜನ ಬಂಡಾಯದವರಂತೆ ಕಾಣಿಸುತ್ತಾರೆ. ವಾಸ್ತವವಾಗಿ ಅದು ಯುವಕರ ಬಂಡಾಯವಲ್ಲ; ಅದು ಹಳೆಯ ವ್ಯವಸ್ಥೆಗೆ ಪ್ರತಿರೋಧ. ಬಂಡಾಯ ಸೃಷ್ಟಿಸುವ ಹೊಸ ಜಗತ್ತನ್ನು ಸಂಪ್ರದಾಯ ವಿರೋಧಿಸುತ್ತದೆ.

ನಾಲ್ಕನೆಯದಾಗಿ, ನಾವು ಮೊದಲ ಬಾರಿಗೆ ಅಣ್ವಸ್ತ್ರಗಳನ್ನು ಸೃಷ್ಟಿಸಿದ್ದೇವೆ. ಈಗ ನಮಗಿರುವ ಎರಡು ಪರ್ಯಾಯಗಳೆಂದರೆ, ಒಂದು – ನಾವೆಲ್ಲ ಒಟ್ಟಾಗಿ ಬದುಕಬೇಕು; ಇಲ್ಲವೇ ಒಟ್ಟಾಗಿ ಸಾಯಬೇಕು. ಜಾಗತಿಕ ಸಾವು, ಇಲ್ಲವೇ ಜಾಗತಿಕ ಸಮಾಜ.

ಭಾರಿ ಅಣ್ವಸ್ತ್ರ ಯುದ್ಧದ ಸಾಧ್ಯತೆಗಳಿಂದಾಗಿ, ಯುವಕರು ಅಶಾಂತರಾಗಿದ್ದಾರೆ. ಏಕೆಂದರೆ ಅವರ ಭವಿಷ್ಯ ಮುಸುಕಾಗಿದೆ. ಅಣು ಯುದ್ಧ ಯಾವಾಗ ಸಂಭವಿಸುತ್ತದೋ ಹೇಳಲಾಗದು. ಹಾಗಾಗಿ ಅವರ ಭವಿಷ್ಯವೇ ಆತಂಕಕ್ಕೆ ಈಡಾಗಿದೆ. ಯುದ್ಧದ ಆತಂಕದಿಂದಾಗಿ ಅವರಿಗೆ ಬದುಕಲು ಸಮಯವೇ ಇಲ್ಲದಂತಾಗಿದೆ. ಹಾಗಾಗಿ ಅವರಿಗೆ ಈ ಕ್ಷಣವೇ ಅರ್ಥಪೂರ್ಣ. ಅದನ್ನು ಅನುಭವಿಸಿಬಿಡಬೇಕೆಂಬುದೊಂದೇ ಅವರ ದೃಷ್ಟಿ. ಅವರಿಗೆ ನಿನ್ನಿನ ನೆನಪಾಗಲೀ ನಾಳಿನ ನಿರೀಕ್ಷೆಯಾಗಲೀ ಲಕ್ಷ್ಯವಿಲ್ಲ; ಲೆಕ್ಕವಿಲ್ಲ.

ಅಣುಯುದ್ಧದಿಂದ ಯಾವುದೇ ಗಳಿಗೆಯಲ್ಲಿ ಇಡೀ ಭೂಗ್ರಹ ಸಂಪೂರ್ಣವಾಗಿ ನಾಶ ಹೊಂದಬಹುದು. ಎಂತಲೇ ಯುವಜನ ಪ್ರಸ್ತುತ ಕ್ಷಣದ ಬಗೆಗೆ ಚಿಂತಿಸುತ್ತಾರೆ. ಈಗ ಇರುವ ಬದುಕನ್ನು ಹರ್ಷದಿಂದ ಅನುಭವಿಸಬೇಕು ಎನ್ನುತ್ತಾರೆ. ಏಕೆಂದರೆ ಭವಿಷ್ಯದ ಬಗೆಗೆ ಅವರಿಗೆ ಭರವಸೆಯಿಲ್ಲ. ಇದಕ್ಕಾಗಿ ನಾವು ಕಳವಳಪಡಬೇಕಾಗಿಲ್ಲ. ಯುವ ಮನಸ್ಸಿಗೆ ಸಹಜ ಒಲವು. ಇದರಿಂದ ಹೊಸ ಮನಸ್ಸುಗಳ ಹೊಸ ಜಗತ್ತನ್ನು ಸೃಷ್ಟಿಸಲು ಅನುಕೂಲವಾಗುತ್ತದೆ.

ಓಷೋ ಅವರ ಈ ವಿಚಾರಗಳ ಹಿನ್ನೆಲೆಯಲ್ಲಿ, ನಮ್ಮ ಯುವಕರು ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡು, ಸಂಕುಚಿತ ಮತ್ತು ಸೀಮಿತ ಪರಿಧಿಗಳನ್ನು ದಾಟಿ, ವಿಶಾಲ ಮತ್ತು ವಿವೇಕದ ದೃಷ್ಟಿಯಿಂದ ಹೊಸ ಸಮಾಜ ನಿರ್ಮಾಣಕ್ಕೆ ತೊಡಗುವಂತೆ ಮಾಡಬೇಕಾಗಿದೆ.

# ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಒಂದು ದಿನ ರೋವರಿಂಗ್ ಮತ್ತು ರೇಂಜರಿಂಗ್ ಮಾಹಿತಿ ಶಿಬಿರ



**ಕಲ್ಯಾಣ ಕರ್ನಾಟಕ –** ಜುಲೈ 18 ರಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು, ರಾಯಚೂರುರವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಸರ್ಕಾರಿ/ ಅನುದಾನಿತ/ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಹಾಗೂ ಉಪನ್ಯಾಸಕರಿಗೆ ಒಂದು ದಿನದ ರೋವರಿಂಗ್–ರೇಂಜರಿಗ್ ಮಾಹಿತಿ ಕಾರ್ಯಗಾರವನ್ನು ವೀರಶೈವ ಮಹಾಂತೇಶ ಕಲ್ಯಾಣ ಮಂಟಪ, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು.

ಶ್ರೀಮತಿ ಬಿ.ವಿ ರಾಮಲತಾ, ಜಂಟಿ ಕಾರ್ಯದರ್ಶಿಗಳು (ಗೈ) ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ರೀ ಸೋಮಶೇಖರಪ್ಪ ಹೋಕ್ರಾಣಿ, ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಯಚೂರು ಇವರು ಕಾರ್ಯಾಗಾರವನ್ನು ಉದ್ಘಾಟಿಸಿದರು.

ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಡಾ॥ ಭರಶೆಟ್ಟಿ, LT(S), ಜಿಲ್ಲಾ ಕಾರ್ಯದರ್ಶಿಗಳು ಬೀದರ್, ಶ್ರೀ ಗುರುಮೂರ್ತಿ, LT(S), ದಕ್ಷಿಣ ಕನ್ನಡ ಜಿಲ್ಲೆ, ಶ್ರೀಮತಿ ಲತಾ ಮಂಜುನಾಥ, HWB(G), ಶ್ರೀಮತಿ ರೂಪಾಲಿ ರಾಥೋಡ್, HWB(R), ಶ್ರೀ ಸಂತೋಷ್ ಹುಗ್ಗಿ, HWB(R), ಶ್ರೀಮತಿ ಸೀಮಾ ಜಸ್ಟಿನ್, ALT(G) ಜಿಲ್ಲಾ ಸಹಾಯಕ ಆಯುಕ್ತರು, ಶ್ರೀಮತಿ ಸಿಂಧನೂರು ರವರು ಮಾಹಿತಿಯನ್ನು ನೀಡಿದರು. ವೇದಿಕೆಯಲ್ಲಿ ಶ್ರೀ ಬಸವರಾಜ, ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ದಾನಮ್ಮ, ಜಿಲ್ಲಾ ಖಜಾಂಚಿಗಳು ಮತ್ತು ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮಲ್ಲೇಶ್ವರಿ ಜೂಜಾರೇ, ASOC/ ರೇಂಜರಿಂಗ್ ವಿಭಾಗ/ ಕಲ್ಯಾಣ ಕರ್ನಾಟಕ ಉಸ್ತುವಾರಿ ಇವರು ಮಾಡಿದರು. ಶ್ರೀ ಅಂಬಣ್ಣ ನಾಯಕ, ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ ಎಲ್ಲರಿಗೂ ವಂದಿಸಿದರು. ಈ ಕಾರ್ಯಾಗಾರದಲ್ಲಿ ರೋವರ್, ಸ್ಕೌಟ್ ಲೀಡರ್, ರೇಂಜರ್ ಲೀಡರ್, ಉಪನ್ಯಾಸಕರು ಒಟ್ಟು 170 ಜನ ಭಾಗವಹಿಸಿದ್ದರು.




**ಮೈಸೂರು ವಿಭಾಗ –** ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಕಛೇರಿ, ಬೆಂಗಳೂರು, ರಾಜ್ಯ ಸಂಸ್ಥೆಯಿಂದ ಮೈಸೂರು ಜಿಲ್ಲಾ ಸಂಸ್ಥೆಯ ಸಹಕಾರದಲ್ಲಿ ಜುಲೈ 12 ರಂದು ಮೈಸೂರು ವಿಭಾಗ ಮಟ್ಟದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ರೋವರ್ ಮತ್ತು ರೇಂಜರ್‌ನ ಸಾಮಾನ್ಯ ಮಾಹಿತಿ ಶಿಬಿರವನ್ನು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ "ಸಾಹುಕಾರ್ ಚೆನ್ನಯ್ಯ ಸಭಾಂಗಣ"ದಲ್ಲಿ ಆಯೋಜಿಸಲಾಗಿತ್ತು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ ರೋವರ್ಸ್ – ರೇಂಜರ್ಸ್ ಸೇವಾ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ರೋವರ್ಸ್–ರೇಂಜರ್ಸ್ ಘಟಕಗಳನ್ನು ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾರಂಭಿಸುವಂತೆ ವಿನಂತಿಸಿದರು. ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಕರ್ನಾಟಕ ಬೆಂಗಳೂರು ರವರು ಈ ಮಾಹಿತಿ ಶಿಬಿರವನ್ನು ಉದ್ಘಾಟಿಸಿದರು. ಶ್ರೀಮತಿ ನಾಗಮ್ಮ, ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಬಿ.ಕೆ. ಬಸವರಾಜ, ಜಂಟಿ ರಾಜ್ಯ ಕಾರ್ಯದರ್ಶಿಗಳು (ಸ್ಕೌಟ್ಸ್), ಶ್ರೀಮತಿ ರಾಮಲತಾ, ಜಂಟಿ ರಾಜ್ಯ ಕಾರ್ಯದರ್ಶಿಗಳು (ಗೈಡ್ಸ್), ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಗೈಡ್ ಆಯುಕ್ತರು, ಮೈಸೂರು ಹಾಗೂ ಉಪಾಧ್ಯಕ್ಷರು ರಾಜ್ಯ ಸಂಸ್ಥೆ, ಡಾ. ಕೆ.ಬಿ. ಗುರುಮೂರ್ತಿ, ಜಿಲ್ಲಾ ಖಜಂಚಿಗಳು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ಶ್ರೀ ಎಂ. ಗುರುಮೂರ್ತಿ, ಎಲ್.ಟಿ. (ಸ್ಕೌಟ್ಸ್), ಮಂಡ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವರಪ್ರಸಾದ್, ಶ್ರೀ ಎಂ.ಎ. ಚೆಲ್ಲಯ್ಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಮಾಹಿತಿ ಶಿಬಿರದಲ್ಲಿ ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಿಂದ ಪದವಿ ಪೂರ್ವ ಕಾಲೇಜುಗಳ 300 ಉಪನ್ಯಾಸಕರುಗಳು ಭಾಗವಹಿಸಿದ್ದರು.

**ಬೆಂಗಳೂರು ವಿಭಾಗ** – ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ರಾಜ್ಯ ಸಂಸ್ಥೆಯಿಂದ ಜುಲೈ 20ರಂದು "ಕೊಂಡಜ್ಜಿ ಬಸಪ್ಪ ಸಂಭಾಗಣ", ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರಿನಲ್ಲಿ 'ಬೆಂಗಳೂರು ವಿಭಾಗ ಮಟ್ಟದ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಮಾಹಿತಿ ಶಿಬಿರ'ವನ್ನು ಸಂಘಟಿಸಲಾಗಿತ್ತು.



ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳನ್ನು ಸಂಘಟಿಸುವ ಮೂಲಕ ದೇಶದಲ್ಲಿ ಉತ್ತಮ ಪ್ರಜೆಗಳಾಗಿ ತಯಾರು ಮಾಡಲು ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಣದ ಅವಶ್ಯಕತೆ ತಿಳಿಸಿದರು.

ಪ್ರೊ॥ ಎಂ.ಎಸ್. ಆಶಾದೇವಿ, ಪ್ರಾಧ್ಯಾಪಕರು, ಮಹಾರಾಣಿ ಕಾಲೇಜು ಬೆಂಗಳೂರು ಇವರು ಶಿಬಿರವನ್ನು ಉದ್ಘಾಟಿಸಿ ಶುಭಹಾರೈಸಿ, ಸ್ಕೌಟಿಂಗ್ ಗೈಡಿಂಗ್‌ನ ಮಹತ್ವವನ್ನು ವಿವರಿಸಿದರು. ಶ್ರೀ ಗುಬ್ಬಿಗೂಡು ರಮೇಶ್, ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸ್ಕೌಟಿಂಗ್ ಗೈಡಿಂಗ್ ಅವಶ್ಯಕತೆ ಬಗ್ಗೆ ತಿಳಿಸಿ ಎಲ್ಲಾ ಕಾಲೇಜುಗಳಲ್ಲಿ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು. ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ರಾಜ್ಯ ಜಂಟಿ ಕಾರ್ಯದರ್ಶಿ ಶ್ರೀ ಬಿ.ಕೆ. ಬಸವರಾಜ ಧನ್ಯವಾದ ನೀಡಿದರು.

ರಾಜ್ಯ ಗೈಡ್ ಆಯುಕ್ತರಾದ ಶ್ರೀಮತಿ ಗೀತಾ ನಟರಾಜ್, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ರಾಜ್ಯ ಜಂಟಿ ಕಾರ್ಯದರ್ಶಿ (ಗೈಡ್ಸ್), ಶ್ರೀಮತಿ ಬಿ.ವಿ. ರಾಮಲತಾ, ತರಬೇತಿ ನಾಯಕರಾದ ಶ್ರೀ ನರೇಂದ್ರ ಕುಮಾರ್ ಎಂ.ಎನ್., ಶ್ರೀಮತಿ ಲತಾ ಮಂಜುನಾಥ, ಶ್ರೀ ಸತ್ಯಜಿತ್ ಚಟರ್ಜಿ, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್) ಶ್ರೀಮತಿ ಕೆ.ವಿ. ಶ್ಯಾಮಲ, ಕಾರ್ಯಕ್ರಮ ನಿರ್ವಹಿಸಿದರು. ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್) ಶ್ರೀಮತಿ ಸಿ. ಮಂಜುಳ, ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್) ಶ್ರೀ ನಾಗೇಶ್ ಆರ್ ಶಿವಪೂರ್, ಪರೀಕ್ಷಾ ವಿಭಾಗದ ಉಸ್ತುವಾರಿ ಶ್ರೀಮತಿ ಕುಮಾರಿ ಹೊನ್ನಮ್ಮ, ಇವರುಗಳು ಸಹಕರಿಸಿದರು.

ಈ ಮಾಹಿತಿ ಶಿಬಿರದಲ್ಲಿ ಬೆಂಗಳೂರು ವಿಭಾಗದ ಜಿಲ್ಲೆಗಳಿಂದ ಸುಮಾರು 340ಕ್ಕೂ ಹೆಚ್ಚು ಉಪನ್ಯಾಸಕರು ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

**ಬೆಳಗಾವಿ ವಿಭಾಗ** – ಜುಲೈ 14 ರಂದು ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಹಯೋಗದಲ್ಲಿ ಬೆಳಗಾವಿ ನಗರದ ಸೆಂಟ್ ಅಂಥೋಣಿ ಕನ್ನಡ ಪ್ರಾಥಮಿಕ ಶಾಲೆ, ಕ್ಯಾಂಪ್ ಇಲ್ಲಿ ಬೆಳಗಾವಿ ವಿಭಾಗದ ಅನುದಾನ ರಹಿತ, ಅನುದಾನಿತ ಹಾಗೂ ಸರಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಮತ್ತು ಉಪನ್ಯಾಸಕಿಯರುಗಳಿಗೆ ಒಂದು ದಿನದ ಮಾಹಿತಿ ಶಿಬಿರವು ಜರುಗಿತು. ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಜ್ಯೋತಿ ಬೆಳಗಿಸುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡುತ್ತಾ ಭಾರತದ ಭಾವಿ ಭವಿಷ್ಯಕ್ಕೆ ಪರಿಸರದ ಅವಶ್ಯಕತೆ ಇದೆ, ಇದನ್ನು ಉಳಿಸಲು ಬನ್ನಿ ಹಂತದಿಂದ ರೋವರ್ ಮತ್ತು ರೇಂಜರ್ ಹಂತದವರೆಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿ ನಿರ್ವಹಿಸಲು ಮಕ್ಕಳಿಗೆ ಪ್ರೇರೇಪಣೆ ನೀಡಬೇಕೆಂದು ಹೇಳಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಆಯುಕ್ತರಾದ (ಗೈಡ್ಸ್) ಶ್ರೀಮತಿ ಪ್ರಭಾವತಿ ಪಾಟೀಲ್, ಜಿಲ್ಲಾ ಕಾರ್ಯದರ್ಶಿ ಶ್ರೀ ವೆಂಕಟೇಶ ಬೀಳಗಿ ಉಪಸ್ಥಿತರಿದ್ದರು. ಶಿಬಿರದ ನಾಯಕರಾದ ಶ್ರೀ ರಾಜೇಶ್ ಅವಲಕ್ಕಿ, ಶ್ರೀಮತಿ ಅನ್ನಪೂರ್ಣ ಕುರಬೇಟ, ಶ್ರೀಮತಿ ಲಕ್ಷ್ಮಿ ಬಹಾದ್ದೂರಿ, ಶ್ರೀ ಪ್ರಕಾಶ್ ಪಾಟೀಲ ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದ ಉಸ್ತುವಾರಿಯನ್ನು ಜಿಲ್ಲಾ ಸಂಘಟಕರುಗಳು ನಿರ್ವಹಿಸಿದರು.



# ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರಗಳು

**ಕೊಂಡಜ್ಜಿ –** ರಾಜ್ಯ ಸಂಸ್ಥೆ ವತಿಯಿಂದ ಜುಲೈ 15 ರಿಂದ 17ರ ವರೆಗೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರವನ್ನು ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 104 ಸ್ಕೌಟ್ಸ್, 209 ಗೈಡ್ಸ್, 18 ದಳ ನಾಯಕರುಗಳು ಹಾಗೂ ಸ್ಕೌಟ್-ಗೈಡ್ ವಿಭಾಗದಿಂದ 9 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿ ಒಟ್ಟು 342 ಜನರು ಭಾಗವಹಿಸಿರುತ್ತಾರೆ. ಶ್ರೀ ಸಿ.ಎಂ. ಪರಮೇಶ್ವರಯ್ಯ ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಶಶಿಕಲಾ, ಗೈಡ್ ವಿಭಾಗದ ನಾಯಕರುಗಳಾಗಿ ಹಾಗೂ ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈ) ಇವರು ಶಿಬಿರದ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿ, ಶಿಬಿರದ ಉಸ್ತುವಾರಿಯನ್ನು ವಹಿಸಿಕೊಂಡು ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ.

**ದೊಡ್ಡಬಳ್ಳಾಪುರ –** ರಾಜ್ಯ ಸಂಸ್ಥೆಯ ವತಿಯಿಂದ ಜುಲೈ 15 ರಿಂದ 17ರ ವರೆಗೆ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಹಾಗೂ ಮಧುಗಿರಿ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರವನ್ನು ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 166 ಸ್ಕೌಟ್ಸ್, 139 ಗೈಡ್ಸ್, 22 ದಳ ನಾಯಕರುಗಳು, ಸ್ಕೌಟ್-ಗೈಡ್ ವಿಭಾಗದಿಂದ 20 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿಒಟ್ಟು 349 ಜನರು ಭಾಗವಹಿಸಿರುತ್ತಾರೆ. ಡಾ॥ ನಾರಾಯಣಸ್ವಾಮಿರವರು ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಕೃಪಾ ವಿಜಯ್‌ರವರು ಗೈಡ್ ವಿಭಾಗದ ನಾಯಕರುಗಳಾಗಿದ್ದರು ಹಾಗೂ ಶ್ರೀ ಎನ್. ಶ್ರೀನಿವಾಸನ್, ಸಹಾಯಕ ರಾಜ್ಯ ಆಯುಕ್ತರು ಇವರು ಶಿಬಿರದ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿರುತ್ತಾರೆ ಮತ್ತು ಶ್ರೀಮತಿ ಅರುಣಮಾಲ, ಸಹಾಯಕ ರಾಜ್ಯ ತರಬೇತಿ ಆಯುಕ್ತರು (ಗೈಡ್) ಇವರು ಶಿಬಿರದ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡಿರುತ್ತಾರೆ. ಶ್ರೀ ನಾಗರಾಜ್, ಜಿಲ್ಲಾ ಮುಖ್ಯ ಆಯುಕ್ತರು, ಬೆಂಗಳೂರು ಗ್ರಾಮಾಂತರ ಇವರು ಶಿಬಿರದಲ್ಲಿ ಸಹಕರಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಂಧ್ಯರವರು ಜುಲೈ 17 ರಂದು ಶಿಬಿರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

**ದಕ್ಷಿಣ ಕನ್ನಡ –** ರಾಜ್ಯ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಜುಲೈ 15 ರಿಂದ 17ರ ವರೆಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾರವಾರ ಜಿಲ್ಲೆಗಳ ಸ್ಕೌಟ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯಪುರಸ್ಕಾರ ಪರೀಕ್ಷಾ ಶಿಬಿರವನ್ನು ಸ್ಕೌಟ್-ಗೈಡ್ ತರಬೇತಿ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 151 ಸ್ಕೌಟ್ಸ್, 30 ದಳ ನಾಯಕರುಗಳು ಹಾಗೂ8 ಸಹ ನಾಯಕರುಗಳು ಹಾಗೂ ನಾಯಕರು ಸೇರಿ ಒಟ್ಟು 190 ಜನರು ಭಾಗವಹಿಸಿರುತ್ತಾರೆ. ಶ್ರೀ ಹೆಚ್. ಶಿವಶಂಕರ್‌ರವರು ಶಿಬಿರದ ನಾಯಕರಾಗಿರುತ್ತಾರೆ. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್)ರವರು ಶಿಬಿರದ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿದರು. ಶಿಬಿರದ ಉದ್ಘಾಟನೆಯಲ್ಲಿ ಡಾ॥ ಎಂ. ಮೋಹನ್ ಆಳ್ವರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು. ಮೂಡಬಿದ್ರೆ -ಮುಲ್ಕಿ ಕ್ಷೇತ್ರದ ಶಾಸಕರಾದ ಶ್ರೀ ಉಮಾನಾಥ್ ಕೊಟ್ಯಾನ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.

**ಉಡುಪಿ –** ರಾಜ್ಯ ಸಂಸ್ಥೆ ಮತ್ತು ಉಡುಪಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಜುಲೈ 15 ರಿಂದ 17ರ ವರೆಗೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾರವಾರ ಜಿಲ್ಲೆಗಳ ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ವಿ.ಎಸ್. ಆಚಾರ್ಯ ಸ್ಕೌಟ್-ಗೈಡ್ ತರಬೇತಿ ಕೇಂದ್ರ, ಅಲೆಯೂರು, ಉಡುಪಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 190 ಗೈಡ್ಸ್, 33 ದಳ ನಾಯಕರುಗಳು, 10 ಸಹ ನಾಯಕರುಗಳು ಹಾಗೂ ನಾಯಕರು ಸೇರಿ ಒಟ್ಟು 234 ಜನರು ಭಾಗವಹಿಸಿರುತ್ತಾರೆ. ಶ್ರೀಮತಿ ಮಮತಾ ಬಿ.ಎಲ್.ರವರು ಶಿಬಿರದ ನಾಯಕರಾಗಿದ್ದರು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ರವರು ಶಿಬಿರದ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿರುತ್ತಾರೆ ಮತ್ತು ಶ್ರೀ ಆನಂದ್ ಅಡಿಗ, ಎಲ್.ಟಿ. (ಸ್ಕೌ) ಮತ್ತು ಉಡುಪಿ ಜಿಲ್ಲಾ ಕಾರ್ಯದರ್ಶಿ ಇವರು ಶಿಬಿರದ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು.

**ವಿಜಯಪುರ –** ರಾಜ್ಯ ಸಂಸ್ಥೆ ಮತ್ತು ವಿಜಯಪುರ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಜುಲೈ 15 ರಿಂದ 17ರ ವರೆಗೆ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯಪುರಸ್ಕಾರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರವನ್ನು ವಸಂತಿ ಬಾಯಿ ಜಿಗಜಿನಿ ಸ್ಕೌಟ್-ಗೈಡ್ ಜಿಲ್ಲಾ ತರಬೇತಿ ಕೇಂದ್ರ, ಬುರಣಪುರ, ವಿಜಯಪುರ ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಸದರಿ ಪರೀಕ್ಷಾ ಶಿಬಿರದಲ್ಲಿ 90 ಸ್ಕೌಟ್ಸ್, 128 ಗೈಡ್ಸ್, 15 ದಳ ನಾಯಕರುಗಳು, ಸ್ಕೌಟ್-ಗೈಡ್ ವಿಭಾಗದಿಂದ 9 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿ ಒಟ್ಟು 244 ಜನರು ಭಾಗವಹಿಸಿರುತ್ತಾರೆ. ಶ್ರೀ ನಬಿ ಭಗವಾನ್ ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಭಾರತಿ ಹೊಸಮನಿರವರು ಗೈಡ್ ವಿಭಾಗದ ನಾಯಕರುಗಳಾಗಿದ್ದರು, ಶ್ರೀಮತಿ ಕುಮಾರಿ ಹೊನ್ನಮ್ಮ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಗೈ) ಮತ್ತು ಪರೀಕ್ಷಾ ವಿಭಾಗದ

ಇನ್‌ಚಾರ್ಜ್ ಇವರು ಶಿಬಿರದ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿ, ಶಿಬಿರದ ಸಂಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ದಣ್ಣ ಸಕ್ರಿಯವರು, ಜಿಲ್ಲಾ ಕಾರ್ಯದರ್ಶಿ ಶ್ರೀ ಪಿ.ಎಸ್. ಕುಂಬಾರ್ ಶಿಬಿರದ ಕಾರ್ಯಕ್ರಮದಲ್ಲಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

**ಕಲಬುರ್ಗಿ –** ರಾಜ್ಯ ಸಂಸ್ಥೆ ಮತ್ತು ಕಲಬುರ್ಗಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಜುಲೈ 15 ರಿಂದ 17ರ ವರೆಗೆ ಬೀದರ್ ಮತ್ತು ಕಲಬುರ್ಗಿ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಮಟ್ಟದ ರಾಜ್ಯಪುರಸ್ಕಾರ ಸ್ಕೌಟ್ಸ್–ಗೈಡ್ಸ್ ಪರೀಕ್ಷಾ ಶಿಬಿರವನ್ನು ನೃಪತುಂಗ ಡಿಗ್ರಿ ಕಾಲೇಜು ಆವರಣ, ಉಡಿಗೆ ರಸ್ತೆ, ಸೇಡಂ ತಾಲ್ಲೂಕು, ಕಲಬುರ್ಗಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಪರೀಕ್ಷಾ ಶಿಬಿರದಲ್ಲಿ 190 ಸ್ಕೌಟ್ಸ್, 170 ಗೈಡ್ಸ್, 31 ದಳ ನಾಯಕರುಗಳು, ಸ್ಕೌಟ್–ಗೈಡ್ ವಿಭಾಗದಿಂದ 21 ಸಹ ನಾಯಕರುಗಳು ಹಾಗೂ ಇಬ್ಬರು ನಾಯಕರು ಸೇರಿ ಒಟ್ಟು 414 ಜನರು ಭಾಗವಹಿಸಿರುತ್ತಾರೆ. ಶ್ರೀ ನಾಗರಾಜ್ ಇವರು ಸ್ಕೌಟ್ ವಿಭಾಗ ಮತ್ತು ಶ್ರೀಮತಿ ಡಾ॥ ಶಬಾನಾರವರು ಗೈಡ್ ವಿಭಾಗದ ನಾಯಕರುಗಳಾಗಿರುತ್ತಾರೆ. ಶ್ರೀ ಪಿ.ವೈ. ಪಾಟೀಲ್ ಬೆಳಗಾವಿ ಇವರು ಪರಿವೀಕ್ಷಕರಾಗಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಚೆನ್ನವೀರಯ್ಯ ಸ್ವಾಮಿ ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಶಿಬಿರದ ಯಶಸ್ವಿಗೆ ಸಹಕರಿಸಿದರು.

**ಬಳ್ಳಾರಿ –** ಜುಲೈ 15 ರಿಂದ 17ರ ವರಗೆ "ಜಿಂದಾಲ್ ಆದರ್ಶ ವಿದ್ಯಾಲಯ ಶಂಕರಬಂಡೆ, ತೋರಣಗಲ್" ಸಂಡೂರು ತಾಲ್ಲೂಕು ಬಳ್ಳಾರಿ ಜಿಲ್ಲೆ ಇಲ್ಲಿ ಬಳ್ಳಾರಿ, ವಿಜಯನಗರ, ಕೊಪ್ಪಳ ಈ ಮೂರು ಜಿಲ್ಲೆಗಳ ರಾಜ್ಯ ಪುರಸ್ಕಾರ ಪರೀಕ್ಷೆಗೆ ಸ್ಕೌಟ್ಸ್ 187, ಗೈಡ್ಸ್ 196 ಒಟ್ಟು 383 ಮಂದಿ ರಾಜ್ಯದ ಸ್ಕೌಟ್ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಶ್ರೀಮತಿ ಮಲ್ಲೇಶ್ವರಿ ಜುಜಾರೆ ಎಲ್.ಟಿ.(ಗೈ) ಎ.ಎಸ್.ಓ.ಸಿ. ಕಲ್ಯಾಣ ಕರ್ನಾಟಕ, ವೀಕ್ಷಕರಾಗಿ ಸ್ಕೌಟ್ಸ್ ವಿಭಾಗಕ್ಕೆ ನಾಯಕರಾಗಿ ಶ್ರೀಕಾಂತ ಮಾಸಗಟ್ಟಿ ಕೊಪ್ಪಳ ಎ.ಎಲ್.ಟಿ(ಎಸ್), ಗೈಡ್ ವಿಭಾಗಕ್ಕೆ ನಾಯಕರಾಗಿ ಶ್ರೀಮತಿ ಕಾತ್ಯಾಯಿನಿ ಎಲ್.ಟಿ.(ಗೈ) ಕಾರ್ಯನಿರ್ವಹಿಸಿದರು.

ಜುಲೈ 16 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ "ಮಕ್ಕಳಲ್ಲಿ ಬಾಲ್ಯದಲ್ಲಿಯೇ ಶಿಕ್ಷಣದ ಜೊತೆಗೆ ಸ್ಕೌಟ್ಸ್–ಗೈಡ್ಸ್‌ನ ಸೇವಾ ಮನೋಭಾವನೆ, ಟೆಂಟ್‌ಗಳಲ್ಲಿ ವಾಸ, ಪರಿಸರ ಪ್ರೇಮಿಗಳಾಗಿ ಪ್ರಾಣಿ–ಪಕ್ಷಿಗಳ ಜೀವರಕ್ಷಕರಾಗಿ, ಶಿಸ್ತು ಸಹನೆ ನಾಯಕತ್ವದ ಗುಣ, ಸೇವಾ ಪದಕಗಳ ಗಳಿಕೆಯ ಬಗ್ಗೆ ಜ್ಞಾನವನ್ನು ಪಡೆದು ಮುಂದೆ ಉತ್ತಮ ಪ್ರಜೆಗಳಾಗಿ ನಾಗರೀಕರಾಗಿ ರಾಷ್ಟ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಾರೆ" ಎಂದು ಹೇಳಿದರು. ಜುಲೈ 17ರ ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆ ಮಾಡಲಾಯಿತು.

**ಧಾರವಾಡ –** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ರಾಜ್ಯ ಮಟ್ಟದ ಸ್ಕೌಟ್ಸ್–ಗೈಡ್ಸ್ ಮಕ್ಕಳ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವು ಜುಲೈ 15 ರಿಂದ 17ರ ವರೆಗೆ ನಡೆಸಲಾಯಿತು. ಶಿಬಿರದಲ್ಲಿ ಧಾರವಾಡ, ಹಾವೇರಿ ಮತ್ತು ಶಿರಸಿ ಜಿಲ್ಲೆಗಳಿಂದ 181 ಸ್ಕೌಟ್ಸ್‌ಗಳು, 159 ಗೈಡ್ಸ್‌ಗಳು, 40 ಸ್ಕೌಟರ್ಸ್ ಗೈಡರ್ಸ್‌ಗಳು ಮತ್ತು 12 ಸಿಬ್ಬಂದಿ ವರ್ಗ ಹಾಗೂ 15 ರೋವರ್ಸ್‌ಗಳು ಸೇರಿ ಒಟ್ಟು 405 ಜನರು ಭಾಗವಹಿಸಿದರು. ಶಿಬಿರದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ "ಮಕ್ಕಳು ನಾಯಕತ್ವದ ಗುಣ, ಸೇವಾ ಮನೋಭಾವನೆ, ಧೈರ್ಯ, ನೇರ ನಡೆ, ಸತ್ಯವಾದ ಮಾತುಗಳು, ಬಲಿಷ್ಠವಾದ ಆರೋಗ್ಯವು ಸ್ಕೌಟ್ಸ್–ಗೈಡ್ಸ್‌ನಲ್ಲಿ ಕಲಿಯಬೇಕು" ಎಂದರು. ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಗಜಾನನ ಮನ್ನಿಕೇರಿ ಇವರು ಮಾತನಾಡಿ "ದೇಶಾಭಿಮಾನ ಬೆಳೆಸಿಕೊಂಡು ಉತ್ತಮ ನಾಗರಿಕರು ಆಗಬೇಕು" ಎಂದರು. ಸದರಿ ಶಿಬಿರಕ್ಕೆ ವೀಕ್ಷಕರಾಗಿ ಆಗಮಿಸಿದ್ದ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್) ಶ್ರೀ ನಾಗೇಶ ಆರ್. ಶಿವಪೂರ ಇವರು ಮಾರ್ಗದರ್ಶನ ನೀಡಿದರು. ಸದರಿ ಶಿಬಿರಕ್ಕೆ ಜಗದೀಶ ಬೋಸಲೂರು ನಾಯಕರಾಗಿ ಸ್ಕೌಟ್ ವಿಭಾಗಕ್ಕೆ ಮತ್ತು ಶ್ರೀಮತಿ ರತ್ನ. ಎಂ. ಗೈಡ್ ವಿಭಾಗಕ್ಕೆ ನಾಯಕರು ಆಗಿ ಸೇವೆ ಸಲ್ಲಿಸಿದರು.

**ರಾಯಚೂರು –** ಜುಲೈ 15 ರಿಂದ 17ರ ವರಗೆ ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಜಿಲ್ಲಾ ಶಿಕ್ಷಕರ ತರಬೇತಿ ಕೇಂದ್ರ ಡಯಟ್ ಯರಮರಸ್ ಹಾಗೂ ಆದರ್ಶ ವಿದ್ಯಾಲಯ ಯರಮರಸ್ ತಾ: ಜಿ: ರಾಯಚೂರು ಇಲ್ಲಿ ನಡೆಯಿತು, ಶಿಬಿರದ ಮೇಲ್ವಿಚಾರಕರಾಗಿ ಶ್ರೀಮತಿ ಅಜೀಜಾ ಸುಲ್ತಾನ್, ಎಲ್.ಟಿ.(ಜಿ) ಮಾಜಿ ಜಿಲ್ಲಾ ಮುಖ್ಯ ಆಯುಕ್ತರು, ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಬಾಬುರಾವ್ ನಿಂಬೂರಿ, ಎಲ್.ಟಿ.(ಎಸ್) ಬೀದರ್, ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಅನ್ನಪೂರ್ಣ ಯಳವಾರ್, ಎ.ಎಲ್.ಟಿ.(ಜಿ), ಗದಗ ಕಾರ್ಯನಿರ್ವಹಿಸಿದ್ದಾರೆ. ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಜಯಪ್ರಕಾಶ್ ರೆಡ್ಡಿ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು/ ಅಜೀವ ಸದಸ್ಯರು, ಶ್ರೀ ಹನುಮಂತಪ್ಪ ಗವಾಯಿ, ನಿವೃತ್ತ ವಿಷಯ ಪರಿವೀಕ್ಷಕರು ರಾಯಚೂರುರವರು ಶಿಬಿರ ಸ್ಥಳಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭ ಕೋರಿದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ. ಇವರು ಶಿಬಿರವನ್ನು ಸಂಘಟಿಸಿದರು. ಶಿಬಿರದಲ್ಲಿ ಒಟ್ಟು 440 ಸ್ಕೌಟ್ಸ್–ಗೈಡ್ಸ್‌ಗಳು, ದಳನಾಯಕರುಗಳು, ಭಾಗವಹಿಸಿದ್ದರು.

# ರಾಜ್ಯ ಮಟ್ಟದಿಂದ ಆಯೋಜಿಸಿದ್ದ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್ ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳು

ರಾಜ್ಯ ಮಟ್ಟದಿಂದ ಆಯೋಜಿಸಿದ್ದ ವಿಭಾಗೀಯ ಮಟ್ಟದ ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿತ್ತು. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ತರಬೇತಿ ದಿನಾಂಕ | ತರಬೇತಿ ಸ್ಥಳ | ಭಾಗವಹಿಸುವ ಜಿಲ್ಲೆಗಳು | ನಾಯಕರು | ಸಹನಾಯಕರು |
|---|---|---|---|---|---|
| 1 | 17.06.2023 ರಿಂದ 23.06.2023 | ಮೈಸೂರು ಶ್ರೀ ಕಾವೇರಿ ಬೋರೇದೇವರ ದೇವಸ್ಥಾನ ಅರಕೆರೆ, ಶ್ರೀರಂಗಪಟ್ಟಣ ತಾ. ಮಂಡ್ಯ ಜಿಲ್ಲೆ | ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ರಾಮನಗರ | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ಕೆ.ವಿ. ಶಾಮಲ, ಎಸ್.ಟಿ.ಸಿ (ಗೈ), ಬೆಂಗಳೂರು, ಗೈಡ್ ವಿಭಾಗಕ್ಕೆ – ಶ್ರೀಮತಿ ರಾಧಿಕಾ, ಎ.ಎಲ್.ಟಿ (ಗೈ), ಮೈಸೂರು | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ರಾಜಲಕ್ಷ್ಮಿ ಮುಂದುವರೆದ, ಶ್ರೀಮತಿ ಕುಸುಮ ಪ್ರೀ–ಎ.ಎಲ್.ಟಿ<br>ಗೈಡ್ ವಿಭಾಗಕ್ಕೆ – ಶ್ರೀಮತಿ ಮಂಜುಳ, ಎ.ಎಲ್.ಟಿ (ಗೈ), ಮಂಡ್ಯ, ಶ್ರೀಮತಿ ಚಪ್ಪರ್‌ಮನಿ, ಪ್ರೀ–ಎ.ಎಲ್.ಟಿ., ಮಂಡ್ಯ, ಶ್ರೀಮತಿ ಉಷಾರಾಣಿ ಮುಂದುವರೆದ (ಗೈ), ಮಂಡ್ಯ |
| 2 | 22.06.2023 ರಿಂದ 28.06.2023 | ಕೊಂಡಜ್ಜಿ ಬಸಪ್ಪ ಸ್ಕೌಟ್ & ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ | ದಾವಣಗೆರೆ, ಚಿತ್ರದುರ್ಗ, ಶಿರಸಿ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಧಾರವಾಡ, ಹಾವೇರಿ, ಕಾರವಾರ | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ರತ್ನ ತಲವಾರ್, ಎ.ಎಲ್.ಟಿ (ಬಿ)<br>ಗೈಡ್ ವಿಭಾಗಕ್ಕೆ – ಶ್ರೀಮತಿ ರತ್ನ, ಎಲ್.ಟಿ. (ಗೈ) | ಗೈಡ್ ವಿಭಾಗಕ್ಕೆ – ಶ್ರೀಮತಿ ಜ್ಯೋತಿ, ಎ.ಎಲ್.ಟಿ(ಗೈ), ಶಿವಮೊಗ್ಗ<br>ಶ್ರೀಮತಿ ಅನ್ನಪೂರ್ಣ ಕಟಗಿ ಎ.ಎಲ್.ಟಿ (ಗೈ), ಹಾವೇರಿ<br>ಶ್ರೀಮತಿ ಮಧುಶ್ರೀ ಪ್ರೀ–ಎ.ಎಲ್.ಟಿ, ಬೆಳಗಾವಿ,<br>ಶ್ರೀಮತಿ ಸರಸವತಿ ಮೊಳೆ ಪ್ರೀ–ಎ.ಎಲ್.ಟಿ, ಬೆಳಗಾವಿ |
| 3 | 22.06.2023 ರಿಂದ 28.06.2023 | ಕಲಬುರಗಿ– ಮೈರಾಡ್ ತರಬೇತಿ ಕೇಂದ್ರ, ಕಮಲಾಪುರ ರಾಜನಾಳ್ ರಸ್ತೆ, (ಡಯಟ್ ಹತ್ತಿರ ಕಲಬುರಗಿ ಜಿಲ್ಲೆ) | ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ಉಷಾಬಾಯಿ, ಎ.ಎಲ್.ಟಿ(ಬಿ), ರಾಯಚೂರು<br>ಗೈಡ್ ವಿಭಾಗಕ್ಕೆ – ಶ್ರೀಮತಿ ಜಯಶೀಲಾ, ಎ.ಎಲ್.ಟಿ(ಗೈ), ಬೀದರ್ | ಗೈಡ್ ವಿಭಾಗಕ್ಕೆ– ಶ್ರೀತಿ ಶಂಶದ್ ಬೇಗಂ, ಎ.ಎಲ್.ಟಿ(ಗೈ), ರಾಯಚೂರು<br>ಶ್ರೀಮತಿ ಪ್ರಮೀಳಾ ಪಾಟೀಲ್, ಹೆಚ್.ಡಬ್ಲ್ಯೂ.ಬಿ (ಗೈ), ಕಲಬುರಗಿ<br>ಶ್ರೀಮತಿ ಸುವರ್ಣ, ಹೆಚ್.ಡಬ್ಲ್ಯೂ.ಬಿ (ಗೈ)<br>ಶ್ರೀಮತಿ ಜೂಲಿ, ಹೆಚ್.ಡಬ್ಲೂಬಿ (ಬಿ), ಕಲಬುರಗಿ<br>ಶ್ರೀಮತಿ ಗೌರಮ್ಮ ಮ ಅಮರಣ್ಣವರ ಪ್ರೀ– ಎ.ಎಲ್.ಟಿ (ಗೈ), ಯಾದಗಿರಿ<br>ಶ್ರೀಮತಿ ಚಂದ್ರಕಲಾ ಪಾಟೀಲ್, ಹೆಚ್.ಡಬ್ಲ್ಯೂ.ಬಿ (ಗೈ), ಕಲಬುರಗಿ |
| 4 | 22.06.2023 ರಿಂದ 28.06.2023 | ಕೊಪ್ಪಳ– ಜಿಲ್ಲಾ ತರಬೇತಿ ಕೇಂದ್ರ, ಗುನ್ನಾಳಿ, ಕೊಪ್ಪಳ ಜಿಲ್ಲೆ | ಕೊಪ್ಪಳ, ಬಳ್ಳಾರಿ, ಗದಗ, ವಿಜಯನಗರ | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ಜಯಶ್ರೀ ಜೋಶಿ, ಎಲ್.ಟಿ (ಬಿ), ಬಳ್ಳಾರಿ<br>ಗೈಡ್ ವಿಭಾಗಕ್ಕೆ – ಶ್ರೀಮತಿ ಸುಮಂಗಲ, ಎ.ಎಲ್.ಟಿ (ಗೈ), ಕಲಬುರಗಿ | ಫ್ಲಾಕ್ ವಿಭಾಗಕ್ಕೆ – ಶ್ರೀಮತಿ ಗೀತಾ ದೇವಾಂಗಮಠ, ಹೆಚ್.ಡಬ್ಲ್ಯೂ.ಬಿ(ಬಿ), ಗದಗ<br>ಗೈಡ್ ವಿಭಾಗಕ್ಕೆ– ಶ್ರೀಮತಿ ಬಸಮ್ಮ ಗುಜ್ಜಾಲ್, ಹೆಚ್.ಡಬ್ಲ್ಯೂ.ಬಿ(ಗೈ)<br>ಶ್ರೀಮತಿ ಶಿವಗಂಗಾ ಹಿರೇಮಠ, ಪ್ರೀ–ಎ.ಎಲ್.ಟಿ(ಗೈ), ಗದಗ,<br>ಶ್ರೀಮತಿ ರೇಣುಕಾ ಬಡಿಗೇರ್, ಹೆಚ್.ಡಬ್ಲ್ಯೂ.ಬಿ(ಗೈ)<br>ಶ್ರೀಮತಿ ದಾಕ್ಷಾಯಣಿ, ಪ್ರೀ–ಎ.ಎಲ್.ಟಿ(ಗೈ) |
| 5 | 22.06.2023 ರಿಂದ 28.06.2023 | ವಿಜಯಪುರ– ವಾಸಂತಿಬಾಯಿ ಜಿಗಜಿನಿ, ಸ್ಕೌಟ್ಸ್ & ಗೈಡ್ಸ್, ಜಿಲ್ಲಾ ತರಬೇತಿ ಕೇಂದ್ರ ಬುರಣಾಪುರ, ವಿಜಯಪುರ ಜಿಲ್ಲೆ | ಬಾಗಲಕೋಟೆ, ವಿಜಯಪುರ, ಬೆಳಗಾವಿ | ಗೈಡ್ ವಿಭಾಗಕ್ಕೆ– ಶ್ರೀಮತಿ ಲಕ್ಷ್ಮಿ .ಎಸ್. ಬಹದ್ದೂರಿ, ಎ.ಎಲ್.ಟಿ(ಗೈ), ಬೆಳಗಾವಿ | ಗೈಡ್ ವಿಭಾಗಕ್ಕೆ–<br>ಶ್ರೀಮತಿ ಪ್ರೀತಿಕಾಳೆ, ಪ್ರೀ–ಎ.ಎಲ್.ಟಿ., ವಿಜಯಪುರ,<br>ಶ್ರೀಮತಿ ಮಂಜುಳ, ಹೆಚ್.ಡಬ್ಲ್ಯೂ.ಬಿ., ವಿಜಯಪುರ |

| | | | | | |
|---|---|---|---|---|---|
| 6 | 22.06.2023 ರಿಂದ 28.06.2023 | ಉಡುಪಿ– ಡಾ. ವಿ.ಎಸ್. ಆಚಾರ್ಯ, ಜಿಲ್ಲಾ ತರಬೇತಿ ಕೇಂದ್ರ, ಉಡುಪಿ ಜಿಲ್ಲೆ | ಉಡುಪಿ, ದಕ್ಷಿಣ ಕನ್ನಡ, ಕೊಡಗು | ಫ್ಲಾಕ್ ವಿಭಾಗಕ್ಕೆ– ಶ್ರೀಮತಿ ಶಾರದಾ ಹೆಗ್ಡೆ, ಎ.ಎಲ್.ಟಿ(ಬಿ), ಕಾರವಾರ<br>ಗೈಡ್ ವಿಭಾಗಕ್ಕೆ– ಶ್ರೀಮತಿ ಮೈಥಿಲಿರಾವ್, ಎಲ್.ಟಿ(ಗೈ), ಕೊಡಗು | ಫ್ಲಾಕ್ ವಿಭಾಗಕ್ಕೆ– ಕುಮಾರಿ ವಂದನಾ, ಮುಂದುವರೆದ (ಬಿ.), ಉಡುಪಿ<br>ಗೈಡ್ ವಿಭಾಗಕ್ಕೆ– ಶ್ರೀಮತಿ ಸುಮಂಗಲ, ಹೆಚ್.ಡಬ್ಲ್ಯೂ.ಬಿ.(ಗೈ), ಉಡುಪಿ<br>ಶ್ರೀಮತಿ ರೇವತಿ, ಹೆಚ್.ಡಬ್ಲ್ಯೂ.ಬಿ(ಗೈ), ಉಡುಪಿ<br>ಶ್ರೀಮತಿ ತ್ರಿಶಾಲ, ಹೆಚ್.ಡಬ್ಲ್ಯೂ.ಬಿ(ಗೈ), ದಕ್ಷಿಣ ಕನ್ನಡ<br>ಶ್ರೀಮತಿ ಮೆಬಲ್ ಡಿಸೋಜಾ, ಹೆಚ್.ಡಬ್ಲ್ಯೂ.ಬಿ(ಗೈ), ದಕ್ಷಿಣ ಕನ್ನಡ |

ಮೇಲ್ಕಂಡ ತರಬೇತಿ ಶಿಬಿರಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ಆಯುಕ್ತರು (ವ.ಸಂ.), ಎಲ್.ಟಿ(ಎಸ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಎಸ್), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಜಂಟಿ ಆಯುಕ್ತರು (ಗೈ), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಎಲ್.ಟಿ. ಲೋಕೇಶ್, ಸಹಕಾರ್ಯದರ್ಶಿ, ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಎಲ್.ಟಿ(ಗೈ), ಎ.ಎಸ್.ಒ.ಸಿ (ಗೈ) ಮತ್ತು ರೇಂಜರಿಂಗ್ ಪ್ರಭಾರಿ ಇವರುಗಳು ತರಬೇತಿ ಶಿಬಿರಗಳಿಗೆ ಬೇಟಿ ನೀಡಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಮೈಸೂರು, ಕೊಂಡಜ್ಜಿ ಹಾಗೂ ದೊಡ್ಡಬಳ್ಳಾಪುರ ಶಿಬಿರಗಳಿಗೆ ಭೇಟಿ ನೀಡಿ, ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಮೇಲ್ಕಂಡ ತರಬೇತಿಗಳ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ನಾಗೇಶ್ ಆರ್. ಶಿವಪುರ್, ಎಲ್.ಟಿ(ಎಸ್), ಎಸ್.ಟಿ.ಸಿ(ಎಸ್) ಮತ್ತು ಶ್ರೀಮತಿ ಕೆ.ವಿ. ಶಾಮಲ, ಎಲ್.ಟಿ (ಗೈ), ಎಸ್.ಟಿ.ಸಿ (ಗೈ) ರವರು ವಹಿಸಿದ್ದರು.

ಜೂನ್ 28 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ಈ ದಿನ ಶಿಬಿರಗಳ ಸಮಾರೋಪ ಸಮಾರಂಭವನ್ನು ನಡೆಸಲಾಯಿತು.






**ಮೈಸೂರು – ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರ**





**ಕೊಂಡಜ್ಜಿ – ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರ**





ಕಲಬುರಗಿ – ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ





ಕೊಪ್ಪಳ – ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರ





ಉಡುಪಿ – ಫ್ಲಾಕ್ ಲೀಡರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರ



ವಿಜಯಪುರ – ಕಬ್ ಮಾಸ್ಟರ್‌ಗಳ ಮುಂದುವರೆದ ತರಬೇತಿ ಶಿಬಿರ

# Sri M.A. CHELLAIAH

## 80th Year Birth Day Celebration

The 80th Year Birth Day Celebrations of Social Worker and a Senior Adult Leader of the Bharat Scouts and Guides, Karnataka was held on 8th July 2023 at "Gandhi Bhavan", Bengaluru.

Sri P.C. Mohan, Hon'ble Member of Parliament, Bengaluru Central, Inaugurated the Celebrations by Lighting the Lamp and Watered the Green Plant as a Mark of "SAVE WATER- SAVE NATURE" Campaign. Sri P.C.Mohan in his Inaugural Address said I am very happy to Inaugurate the Celebrations and to participate in the programme and said that Sri Chellaiah has rendered Valuable Services in the field of Scouting and Guiding Education and Social Services field for the last 50 years in Karnataka and particularly in Bengaluru City.

Sri S. Suresh Kumar, Hon'ble Member of Karnataka Legislative Assembly and Former Minister of Primary and Secondary Education, Government of Karnataka in his address said that Sri M.A. Chellaiah is a Simple and High thinking Person who has worked for the well being of the Needy People and he has lived and worked for the wellfare of others and acknowledged his sincere services to the Society for several decades.

Sri A. Devegowda, Hon'ble Member of Karnataka Legislative Council remembered his covdial relationship with Sri Chellaiah for the last 20 years.

Sri R. Sampathraj, Former Mayor of Bruhat Bengaluru Mahanagara Palike recollected the Good Services rendered by Sri M.A. Chellaiah for starting Scout and Guide Units at BBMP Schools and Colleges giving required guidance and support to strengthen the activities of Scouts and Guides in BBMP Schools and Colleges.

Smt. Gangambike Mallikarjun, former Mayor of Bruhat Bengaluru Mahanagara Palike recollected the Services rendered by Sri M.A. Chellaiah at several programmes and activities of BBMP for community Service Programmes organised by BBMP.

Sri Kondajji B. Shanmukhappa, Vice-President, the Bharat Scouts and Guides, Karnataka said Sri Chellaiah was closely connected with the Scouting Family for more than 45 years. He further said that he has served as Joint State Secretary (Scouts ) when he was State Chief Commissioner and served as District Secretary of Bengaluru South District Association for several years and supported in the Publication of Souvenirs, Magazines of Bharat Scouts and Guides as Headquarters Commissioner (Scouts) Publications. He Said that he has attended Number of programmes organised at Swami Vivekananda Service Centre, Lakshmanapuri along with many leaders of Scout / Guide Movement.



Smt Pruthvi Sindhia, Co-ordinator, Congress Party, Padmanabanagar spoke on the occasion.

Sri P. Palani, Secretary of the Celebrations Committee said Sri M.A. Chellaiah is responsible for his entry into the Scout-Guide Movement. He is a good Social Worker and Worked for the poor and has established a School at Lakshmanapuri Slum. Which has catered for the residents of Lakshmanapuri Slum to Educate their children and many of them have Graduated and settled well in their Life.

Sri D. Venkatesh, Convenor of the Celebrations Committee remembered with gratitude his father Late Sri V.P.Deenadayalu Birth Centenary Celebrations held during 2018-19 by the BBMP in a Grand Manner with the guidance and support of our Chief Sri P.G.R. Sindhia and ably helped by Mr. Chellaiah.

Sri M.A. Chellaiah, remembered those who supported and helped him for the active service rendered by him in Social Service in many fields. He thanked Late Sri B.Seetharamaiah, Founder Proprietor, M/s Hotel Kaveri and his Children Sri B.S. Suryanarayana and Sri B.S. Srinivas for their continued support and help to him in providing accommodation and other facilities since he came to Bengaluru. He also thanked Sri Kondajji B. Shanmukhappa, Sri P.G.R. Sindhia, Doctors, Members of Bharat Scouts and Guides, Residents of Lakshmanapuri, all his old students, Scouts, Guides, Unit Leaders, Well-wishers and friends and all those who are responsible in organising his 80th Birthday celebrations under the guidance of our State Chief Commissioner Sri P.G.R. Sindhia.

Sri P.G.R. Sindhia, Former Minister of Home, Finance, Industries, Transport, Government of Karnataka and State Chief Commissioner, Bharat Scouts and Guides, Karnataka in his address said Sri M.A. Chellaiah, a Senior Adult Leader of the Bharat Scouts and Guides and a known Social worker in many fields in the public Life of Bengaluru for the last 50 years. He further said that the July 2023 to July 2024 will be observed as : "Save Water – Save Nature Campaign". He said the Organising Committee has decided to bring out a Souvenir in Aid of "Swami Vivekananda Service Centre", Building Project. Further, he said with the support of every one present in this programme, we will complete the Building Project and hand over to sri M.A. Chellaiah as early as possible.

Sri K.V. Shankarappa, Senior Advocate and the District Chief Commissioner, Bharat Scouts and Guides, Kolar in his presidential address said he knows Sri Chellaiah for nearly 35 years. He further said that Chellaiah has visited many times Kolar on Scout-Guide Programmes along with other office bearers of Bharat Scouts and Guides, Karnataka. He thanked State Chief Commissioner Sri P.G.R. Sindhia for providing him with an opportunity to preside over this programme.

Sri K. Gangappa Gowda, Member of the Organising Committee and State Secretary, Bharat Scouts and Guides, Karnataka welcomed all the Dignitaries , Guests and well-wishers of Chellaiah and mentioned in detail almost the commitment of Sri Chellaiah to the movement for several decades in different capacities at District, State and National Levels.

Sri M.S. Satheesh, Convener of organising Committee and Head Master, Isaac Newton High School, Cottonpet briefed the gathering about the Life Sketch and achievements of Sri M.A. Chellaiah. He has Co-ordinated the entire programme.



# ಆಗಸ್ಟ್ 2023ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 01 | ಸ್ಕಾರ್ಫ್‌ಡೇ/ಸ್ಕೌಟಿಂಗ್ ಸೂರ್ಯೋದಯ ದಿನಾಚರಣೆ ಪ್ರತಿಜ್ಞೆಯ ನವೀಕರಣ | 1 ಆಗಸ್ಟ್ 2023 | ಎಲ್ಲಾ ಹಂತಗಳಲ್ಲಿ |
| 02 | ವಿಶ್ವ ಬುಡಕಟ್ಟು ಜನಾಂಗದ ದಿನಾಚರಣೆ | 9 ಆಗಸ್ಟ್ 2023 | ಎಲ್ಲಾ ಹಂತಗಳಲ್ಲಿ |
| 03 | ಸ್ವಾತಂತ್ರ್ಯ ದಿನಾಚರಣೆ | 15 ಆಗಸ್ಟ್ 2023 | ಎಲ್ಲಾ ಹಂತಗಳಲ್ಲಿ |
| 04 | ಸದ್ಭಾವನಾ ದಿನಾಚರಣೆ | 20 ಆಗಸ್ಟ್ 2023 | ಎಲ್ಲಾ ಹಂತಗಳಲ್ಲಿ |
| 05 | ಟ್ರೂಪ್, ಕಂಪನಿ, ಕ್ರ್ಯೂ, ಟೀ, ನಾಯಕರ ತರಬೇತಿ ಶಿಬಿರ | ಆಗಸ್ಟ್ 2023 | ಜಿಲ್ಲಾ ಮಟ್ಟ |
| 06 | ಕಬ್ಸ್, ಬುಲ್‌ಬುಲ್ಸ್, ಸ್ಕೌಟ್, ಗೈಡ್ ಗ್ರೂಪ್, ದೇಶಭಕ್ತಿ ಗೀತಗಾಯನ, ಜಾನಪದ ಗೀತೆಗಳ ಸ್ಪರ್ಧೆ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ (ನಾಡೋಜಾ ಡಾ|| ಗೊ.ರು. ಚನ್ನಬಸಪ್ಪನವರಿಗೆ ಸಮರ್ಪಣೆ) | ಆಗಸ್ಟ್ 2023 | ಸ್ಥಳೀಯ ಮಟ್ಟದಲ್ಲಿ |
| 07 | ಜಿಲ್ಲಾ ಸೇವಾ ತಂಡಗಳ ರೋವರ್ಸ್-ರೇಂಡರ್ಜ್ಸ್‌ಗಳಿಗೆ ವಿಪತ್ತು ನಿರ್ವಹಣಾ ತರಬೇತಿ | ಆಗಸ್ಟ್ 2023 | ಜಿಲ್ಲಾ ಮಟ್ಟ |
| 08 | ರೋವರ್-ರೇಂಜರ್ ಮೇಟ್ ತರಬೇತಿ ಶಿಬಿರ (ನಾಯಕತ್ವ ಶಿಬಿರ) | ಸೆಪ್ಟೆಂಬರ್ 2023 | ಜಿಲ್ಲಾ ಮಟ್ಟ |
| 09 | ರಾಜ್ಯ ಪುರಸ್ಕರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರಗಳು | 9-8-2023 ರಿಂದ 11-8-2023 | 1. ಡಾ. ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ<br>2. ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಕೇಂದ್ರ ಕೊಂಡಜ್ಜಿ<br>3. ಬೆಳಗಾವಿ |
| 10 | ರಾಜ್ಯ ಪುರಸ್ಕರ ಸ್ಕೌಟ್ಸ್-ಗೈಡ್ಸ್ ಪರೀಕ್ಷಾ ಶಿಬಿರಗಳು | 11.8.2023 ರಿಂದ 13.8.2023 | ಮೈಸೂರು |
| 11 | ರಾಜ್ಯ ಹಣಕಾಸು ಸಮಿತಿ ಸಭೆ | 4.8.2023 | ರಾಜ್ಯ ಕೇಂದ್ರ ಕಛೇರಿ |
| 12 | ರಾಜ್ಯ ಪ್ರಕಟಣಾ ಸಮಿತಿ ಸಭೆ | 4.8.2023 | ರಾಜ್ಯ ಕೇಂದ್ರ ಕಛೇರಿ |
| 13 | ರಾಜ್ಯ ಪರಿಷತ್ ಸಭೆ | 6.8.2023 | ರಾಜ್ಯ ಕೇಂದ್ರ ಕಛೇರಿ |
| 14 | ವಿ.ಪಿ. ದೀನದಯಾಳು ನಾಯ್ಡುರವರ ಜನ್ಮಾದಿನಾಚರಣೆ | 16.8.2023 | ಬೆಂಗಳೂರು |
| | | | - ರಾಜ್ಯ ಕಾರ್ಯದರ್ಶಿ |



# ಜಿಲ್ಲಾ ವಾರ್ತೆಗಳು

## ಬೆಳಗಾವಿ

ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಹಯೋಗದಲ್ಲಿ ಜುಲೈ 3 ರಿಂದ 9ರ ವರೆಗೆ ಜಿಲ್ಲಾ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಜರುಗಿತು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ, ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ನಂತರ ಮಾತನಾಡಿ ತರಬೇತಿ ಪಡೆದ ಎಲ್ಲ ಶಿಕ್ಷಕರುಗಳು ಶಾಲೆಗೆ ಹೋದ ನಂತರ ಕಡ್ಡಾಯವಾಗಿ ಘಟಕಗಳನ್ನು ಪ್ರಾರಂಭಿಸುವಂತೆ ಸೂಚಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜ ನಾಲತವಾಡ, ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ ಬೆಳಗಾವಿ, ಬೆಳಗಾವಿಯ ಡಯಟ್ ಪ್ರಾಂಶುಪಾಲರಾದ ಶ್ರೀ ಎಸ್.ಡಿ. ಗಾಂಜಿ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಪ್ರಭಾವತಿ ಪಾಟೀಲ, ಬೆಳಗಾವಿ ನಗರದ ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಲೀಲಾವತಿ. ಎಸ್. ಹಿರೇಮಠ, ಶಿಬಿರದ ನಾಯಕರುಗಳಾದ ಶ್ರೀ ಎಸ್.ಎಸ್. ಹುಸೇನಿ, ಶ್ರೀ ಬಿ.ವಿ. ನಾಯಕ ಬೊಮ್ಮನ್, ಶ್ರೀ ಎಚ್. ಆಂಜನೇಯ ಉಪಸ್ಥಿತರಿದ್ದರು. ಎಂ.ಎಸ್.ಓ.ಸಿ.ಡಿ.ಬಿ. ಅತ್ತಾರ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರು. ಶ್ರೀ ವಿಠ್ಠಲ ಎಸ್.ಬಿ. ವಂದಿಸಿದರು.



* ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಹಯೋಗದಲ್ಲಿ ಜುಲೈ 10 ರಿಂದ 16ರ ವರೆಗೆ ಜಿಲ್ಲಾ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಜರುಗಿತು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಕ.ರಾ.ಪ್ರಾ. ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರಾದ ಶ್ರೀ ಜಯಕುಮಾರ ಹೆಬಳಿ



ಇವರು ಮಾತನಾಡುತ್ತಾ ಈ ತರಬೇತಿಯಿಂದ ಮಕ್ಕಳಲ್ಲಿ ಬದಲಾವಣೆ ತರಲು ಸಾಧ್ಯವೆಂದು ಹೇಳಿದರು. ಶಿಬಿರದ ನಾಯಕರಾದ ಶ್ರೀಮತಿ ಶಕುಂತಲಾ ನರವಟೆ, ಶ್ರೀಮತಿ ರತ್ನಾ ತಳವಾರ, ಶ್ರೀಮತಿ ಮೀನಾಕ್ಷಿ, ಶ್ರೀಮತಿ ಉಷಾತಾಯಿ ಕೆ. ಹಾಗೂ ಸಹಾಯಕರು ಮತ್ತು ಬೆಳಗಾವಿ ಗ್ರಾಮೀಣ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಎಸ್.ಎಲ್. ಬಂದಕ್ಕನವರ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ಡಿ.ಬಿ. ಅತ್ತಾರ ನಡೆಸಿಕೊಟ್ಟರು. ಶ್ರೀ ವಿಠ್ಠಲ ಎಸ್.ಬಿ. ಶಿಬಿರವನ್ನು ಆಯೋಜಿಸಿದರು. ಈ ಶಿಬಿರಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಭೇಟಿ ನೀಡಿದ್ದರು.

* ಜುಲೈ 01 ರಂದು ಸ್ಥಳೀಯ ಸಂಸ್ಥೆ ಚನ್ನಮ್ಮನ ಕಿತ್ತೂರು ವತಿಯಿಂದ ಸ್ಕೌಟರ್ ಗೈಡರ್ ಸಮಾವೇಶವನ್ನು ಆಯೋಜಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಆರ್.ಟಿ. ಬಳಿಗಾರರವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಸಮನ್ವಯ ಅಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಗೈಡ್ಸ್ ಆಯುಕ್ತರಾದ ಶ್ರೀಮತಿ ಗಾಯತ್ರಿ ಅಜ್ಜನವರ, ಅಕ್ಷರ ದಾಸೋಹ ಸಹಾಯ ನಿರ್ದೇಶಕರು ಹಾಗೂ ಸಹಾಯಕ ಜಿಲ್ಲಾ ಸ್ಕೌಟ್ಸ್ ಆಯುಕ್ತರು ಆದ ಶ್ರೀ ಪ್ರಕಾಶ್ ಮೆಳವಂಕಿ, ಹಿರಿಯ ಸ್ಕೌಟ್ಸ್ ಮಾಸ್ಟರ್‌ಗಳಾದ ಶ್ರೀ ಬಿ.ಸಿ. ಬಿದರಿ, ಜಿಲ್ಲಾ ಸಂಸ್ಥೆಯ ಎ.ಎಸ್.ಓ.ಸಿ.ಯವರಾದ ಶ್ರೀ ವಿಠ್ಠಲ್ ಎಸ್.ಬಿ. ಹಾಗೂ ಶಿಕ್ಷಣ ಸಂಯೋಜಕರಾದ ಶ್ರೀ ಮಹೇಶ್ ಹೆಗಡೆರವರು ಆಗಮಿಸಿದ್ದರು. ಸಮಾರಂಭದಲ್ಲಿ ಭಾಗಿಯಾದ ಮುಖ್ಯ ಅತಿಥಿಗಳು ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳು ವಿದ್ಯಾರ್ಥಿಗಳಲ್ಲಿ, ಶಾಲೆಯಲ್ಲಿ ಶಿಸ್ತನ್ನು ಬೆಳೆಸುತ್ತೆ ಹಾಗೂ ವಿದ್ಯಾರ್ಥಿಗಳಿಗೆ ಮಾನವೀಯ ಮೌಲ್ಯವನ್ನು ತುಂಬುತ್ತದೆ ಹೀಗಾಗಿ ಈ ಸಂಸ್ಥೆಯಲ್ಲಿ



ಎಲ್ಲರೂ ಆಸಕ್ತಿಯಿಂದ ದುಡಿಯಬೇಕು ಎಂದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದಂತಹ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾತನಾಡಿ "ಶಿಕ್ಷಕರು ಕೇವಲ ನೊಂದಣಿ ಮಾಡುವ ಸಲುವಾಗಿ ಘಟಕಗಳನ್ನು ಆರಂಭಿಸಬಾರದು ಪ್ರತಿವಾರಕ್ಕೊಮ್ಮೆ ತರಗತಿಗಳನ್ನು ತೆಗೆದುಕೊಳ್ಳಬೇಕು, ವಿದ್ಯಾರ್ಥಿಗಳಿಗೆ ಸ್ಕೌಟ್ಸ್-ಗೈಡ್ಸ್ ನಿಯಮಗಳನ್ನು ಹೇಳಿಕೊಡಬೇಕು" ಎಂದರು. ಇದೇ ಸಂದರ್ಭದಲ್ಲಿ ಕಿತ್ತೂರು ವಿಧಾನಸಭಾ ಕ್ಷೇತ್ರಕ್ಕೆ ನೂತನವಾಗಿ ಶಾಸಕರಾಗಿ ಆಯ್ಕೆಯಾದ ಶ್ರೀ ಬಾಬಾಸಾಹೇಬ ದೇ ಪಾಟೀಲ ಇವರನ್ನು ಸಂಸ್ಥೆಯ ಪರವಾಗಿ ಅಭಿನಂದಿಸಿ ವಾರ್ಷಿಕ ಕ್ರಿಯಾಯೋಜನೆ ಪುಸ್ತಕವನ್ನು ನೀಡಲಾಯಿತು ಹಾಗೂ ಗಿಡವನ್ನು ನೆಡುವುದರ ಮುಖಾಂತರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಸಭೆಯಲ್ಲಿ ಶ್ರೀ ಬಿ.ಸಿ. ಬಿದರಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆಯ ಧ್ಯೇಯೋದ್ದೇಶಗಳ ಕುರಿತು ವಿವರಣೆಯನ್ನು ನೀಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಡಿ.ಎಚ್. ಪಾಟೀಲ ಸರ್ವರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು ನೆರವೇರಿಸಿದರು. ಸಭೆಯಲ್ಲಿ ಕಿತ್ತೂರು ಶೈಕ್ಷಣಿಕ ವಲಯದಿಂದ ಸುಮಾರು 50 ಜನ ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರು ಶಿಕ್ಷಕಿಯರು ಭಾಗಿಯಾಗಿದ್ದರು.




* ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಬೆಳಗಾವಿ ಜಿಲ್ಲೆಯ ಭೈಲಹೊಂಗಲ ಪಟ್ಟಣದ ಕೆ.ಆರ್.ಸಿ.ಎಸ್. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಕೌಟ್-ಗೈಡ್ ಘಟಕಗಳ ಉದ್ಘಾಟನೆ ಮಾಡಿ 'ಬಸವಣ್ಣನವರ ಸಮಾನತೆಯ ತತ್ವ ಸ್ಕೌಟ್ಸ್-ಗೈಡ್ಸ್‌ನಲ್ಲಿ ಇದೆ. ಆ ನಿಟ್ಟಿನಲ್ಲಿ ಮಕ್ಕಳಲ್ಲಿ ರಾಷ್ಟ್ರ ಪ್ರೇಮ ಹಾಗೂ ನೈತಿಕ ಮೌಲ್ಯವನ್ನು ಬೆಳೆಸುವಲ್ಲಿ ಕೆ.ಆರ್.ಸಿ.ಎಸ್ ಆಂಗ್ಲ ಮಾಧ್ಯಮ ಶಾಲೆಯ 650ಕ್ಕೂ ಹೆಚ್ಚು ಮಕ್ಕಳನ್ನು ಸ್ಕೌಟಿಂಗ್-ಗೈಡಿಂಗ್‌ನಲ್ಲಿ ತೊಡಗಿಸಿ ಮಕ್ಕಳನ್ನು ಸರ್ವಾಂಗೀಣ ಅಭಿವೃದ್ಧಿ ಮಾಡಲು ದಿಟ್ಟ ಹೆಜ್ಜೆ ಇಟ್ಟಿದೆ' ಎಂದು ಹೇಳಿದರು. ಅಪರ ಆಯುಕ್ತರ ಕಾರ್ಯಾಲಯ, ಧಾರವಾಡದ, ಜಂಟಿ ನಿರ್ದೇಶಕ ಶ್ರೀ ಗಜಾನನ ಮನ್ನಿಕೇರಿ ಅವರು ಮಾತನಾಡಿ "ಇಡೀ ಶಾಲೆಗೆ ಶಾಲೆ ಸ್ಕೌಟ್ ಶಾಲೆಯಾಗಿ ಪರಿವರ್ತನೆ ಹೊಂದಿದ್ದು ಮಾದರಿಯಾಗಿದ್ದು. ಬೆಳಗಾವಿ ಜಿಲ್ಲೆಯಲ್ಲಿಯೇ ಇದೊಂದು ಮಾದರಿ ಶಾಲೆ" ಎಂದರು. ಅಧ್ಯಕ್ಷತೆ ವಹಿಸಿದ ಮಾಜಿ ಶಾಸಕರು ಹಾಗೂ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಐ. ಪಾಟೀಲ್‌ರವರು ಮಾತನಾಡಿ "ಹಿಂದೆ ಗುರುಕುಲ ಪದ್ಧತಿಯಲ್ಲಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಈಗ ಮಕ್ಕಳಿರುವಲ್ಲಿಗೆ ಹೋಗಿ ಶಿಕ್ಷಕರು ವಿವಿಧ ರೀತಿಯ ಜೀವನ ಕೌಶಲ್ಯಗಳನ್ನು ಕಲಿಸಬೇಕು" ಎಂದರು. ಶ್ರೀ ಎಂ.ಸಿ. ಬಿರಾದಾರ ಸ್ವಾಗತಿಸಿದರು. ತಾಲ್ಲೂಕಿನ ಸ್ಕೌಟ್ಸ್-ಗೈಡ್ಸ್ ಕಾರ್ಯದರ್ಶಿ ಶ್ರೀ ಎ.ಬಿ. ಅಂಗಡಿ, ಪ್ರಾಸ್ತಾವಿಕ ಮಾತನಾಡಿದರು. ಕುಮಾರಿ ಯುಕ್ತಿ ದೇಶನೂರ ಮತ್ತು ಮಾನಸಾ ಮೂಗಬಸವ ನಿರೂಪಿಸಿ ವಂದಿಸಿದರು.

## ಬಳ್ಳಾರಿ

ಜುಲೈ 13 ರಂದು ಶ್ರೀಮತಿ ಜಯಶ್ರೀ ಜೋಷಿ, ರಾಜ್ಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಪ್ರತಿನಿಧಿ ಹಾಗೂ ಜಿಲ್ಲಾ ಗೈಡ್ಸ್ ತರಬೇತಿದಾರರು, ಶ್ರೀ ನಾಗರಾಜ, ಡಿ.ಟಿ.ಸಿ. ಬಳ್ಳಾರಿ ಹಾಗೂ ಶ್ರೀ ಟಿ.ಸಿ. ಚಂದ್ರಮೌಳಿ, ಮುಖ್ಯಗುರುಗಳು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಜೀವ ಗಾಂಧಿನಗರ, ಸಿರುಗುಪ್ಪ, ಶ್ರೀಮತಿ ಗೀತಾ ಜೆ., ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸಹಕಾರ್ಯದರ್ಶಿ ಹಾಗೂ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು, ಶ್ರೀ ಯೋಗಾನಂದಯ್ಯ ಬಿ.ಆರ್.ಪಿ. ಸಿರುಗುಪ್ಪ, ಶ್ರೀ ಮಾರುತಿ ಸಿ.ಆರ್.ಸಿ. ಸಿರುಗುಪ್ಪ, ಶ್ರೀ ನಟರಾಜಸ್ವಾಮಿ ಕಾರ್ಯದರ್ಶಿಗಳು, ಸ್ಥಳೀಯ ಸಂಸ್ಥೆ ಸಿರುಗುಪ್ಪ, ಶ್ರೀ ನಾಗಲಾಪುರ ಬಸವರಾಜಪ್ಪ ತಾಲ್ಲೂಕು ಅಕ್ಕಿ ಗಿರಿಣಿ ಮಾಲೀಕರ ಸಂಘದ ಅಧ್ಯಕ್ಷರು, ಶ್ರೀಮತಿ ಗಂಗಮ್ಮ ಸ್ತ್ರೀರೋಗ ತಜ್ಞರು ಸಿರುಗುಪ್ಪ ಹಾಗೂ ಸ್ಕೌಟ್ಸ್-ಗೈಡ್ಸ್ ಶಿಕ್ಷಕರೊಂದಿಗೆ ಧ್ವಜಾರೋಹಣ ಮಾಡುವುದರ ಮೂಲಕ ಸ್ಕೌಟರ್ - ಗೈಡರ್ ಸಮಾವೇಶವನ್ನು ಪ್ರಾರಂಭಿಸಲಾಯಿತು. ಶ್ರೀಮತಿ ಬ್ಯಾಳಿ ಮಂಜುಳ, ಶಿಕ್ಷಕಿ ಸ್ವಾಗತ ಮಾಡಿದರು.

ಶ್ರೀ ನಾಗಲಾಪುರ ಬಸವರಾಜಪ್ಪ, ಶ್ರೀಮತಿ ಗಂಗಮ್ಮ, ಸ್ತ್ರೀರೋಗ ತಜ್ಞರು ಮತ್ತು ನಿವೃತ್ತ ಶಿಕ್ಷಕರಾದ ಶ್ರೀ ಶಿವಾಚಾರ್ಯ ಇವರಿಗೆ ಸನ್ಮಾನ ಮಾಡಲಾಯಿತು, 2023-24ರ ವಾರ್ಷಿಕ ಯೋಜನೆ ಪುಸ್ತಕ ಬಿಡುಗಡೆ ಮಾಡಿಸಲಾಯಿತು, ಈ ಸಮಯದಲ್ಲಿ ಶಿಕ್ಷಕರಿಗೆ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟ್-ಗೈಡ್ಸ್ ಜ್ಞಾನವನ್ನು, ಕೌಶಲ್ಯತೆಯನ್ನು, ಬಿ.ಪಿ. ವ್ಯಾಯಾಮ, ಯೋಗ ಮುಂತಾದ ವಿಷಯಗಳ ಬಗ್ಗೆ ಶ್ರೀ ನಾಗರಾಜ್ ಹೇಳಿದರು.



## ಬೆಂಗಳೂರು ಗ್ರಾಮಾಂತರ

ಜೂನ್ 13 ರಿಂದ 16 ರ ವರೆಗೆ ಜಿಲ್ಲಾ ಮಟ್ಟದ ಸ್ಕೌಟ್ಸ್ ಗೈಡ್ಸ್ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವನ್ನು ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ಆಯೋಜಿಸಲಾಯಿತು. ಜೂನ್ 15 ರಂದು ನಡೆದ ಭವ್ಯ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸದರಿ ಪರೀಕ್ಷಾ ಶಿಬಿರದಲ್ಲಿ 453 ಸ್ಕೌಟ್ಸ್-ಗೈಡ್ಸ್ ಶಿಬಿರಾರ್ಥಿಗಳು ಭಾಗವಹಿಸಿದ್ದರು.



* ಜೂನ್ 27 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೂತನ ಜಿಲ್ಲಾಧಿಕಾರಿಗಳಾಗಿ ಆಗಮಿಸಿರುವ ಶ್ರೀಯುತ ಡಾ॥ ಎನ್. ಶಿವಶಂಕರ್, ಭಾ.ಆ.ಸೇ.ರವರನ್ನು ಹೂಗುಚ್ಛ ನೀಡುವ ಮೂಲಕ ಜಿಲ್ಲೆಗೆ ಸ್ವಾಗತ ಕೋರಲಾಯಿತು ಹಾಗೂ ರಾಜ್ಯ ಸಂಸ್ಥೆಯ ವತಿಯಿಂದ ನೀಡಲ್ಪಟ್ಟ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ನೂತನ ಅಪರ ಜಿಲ್ಲಾಧಿಕಾರಿಗಳಾಗಿ ಆಗಮಿಸಿರುವ ಶ್ರೀ ಅಮರೇಶ್ ಹೆಚ್., ಕ.ಆ.ಸೇ (ಆಯ್ಕೆ ಶ್ರೇಣಿ) ರವರನ್ನು ಹೂಗುಚ್ಛ ನೀಡುವ ಮೂಲಕ ಜಿಲ್ಲೆಗೆ ಸ್ವಾಗತ ಕೋರಲಾಯಿತು ಹಾಗೂ ರಾಜ್ಯ ಸಂಸ್ಥೆಯ ವತಿಯಿಂದ ನೀಡಲ್ಪಟ್ಟ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ರಾಜಮ್ಮ ಪ್ರಕಾಶ್, ಶ್ರೀ ರವಿ, ಶ್ರೀ ನಾಗರಾಜ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಆರ್. ವಿಜಯಕುಮಾರಿ ಜಿಲ್ಲಾ ಆಯುಕ್ತರು(ಗೈ), ಶ್ರೀ ಶ್ರೀರಾಮಯ್ಯ, ಜಿಲ್ಲಾ ಆಯುಕ್ತರು(ವ.ಸಂ), ಶ್ರೀ ಎಸ್.ಸಿ. ಗೋಪಾಲಸ್ವಾಮಿ, ಸ್ಕೌಟ್-ಗೈಡ್ ಸ್ವಯಂಸೇವಕರು ಹಾಗೂ ಇತರರು ಉಪಸ್ಥಿತರಿದ್ದರು.



* ಜೂನ್ 27 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯ ವತಿಯಿಂದ ಶ್ರೀ ಶ್ರೀಕಂಠ ಉಪನಿರ್ದೇಶಕರು (ಆಡಳಿತ) ರವರಿಂದ ರಾಜ್ಯ ಸಂಸ್ಥೆಯ ವತಿಯಿಂದ ನೀಡಲ್ಪಟ್ಟ 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕಗಳನ್ನು ಬಿಡುಗಡೆಗೊಳಿಸಲಾಯಿತು ಹಾಗೂ ಯೋಜನೆಗಳನ್ನು ಜಿಲ್ಲಾ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುವಲ್ಲಿ ಸಹಕಾರವನ್ನು ಕೋರಲಾಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ರಾಜಮ್ಮ ಪ್ರಕಾಶ್, ಶ್ರೀ ರವಿ, ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಆರ್. ವಿಜಯಕುಮಾರಿ, ಜಿಲ್ಲಾ ಆಯುಕ್ತರು (ಗೈ) ಹಾಗೂ ಇತರರು ಉಪಸ್ಥಿತರಿದ್ದರು.



* ಜುಲೈ 6 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಡಾ॥ ವಿ.ಎಸ್. ಆಚಾರ್ಯರವರ 84ನೇ ಜನ್ಮ ದಿನಾಚರಣೆಯ ಅಂಗವಾಗಿ ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರದಲ್ಲಿ ವನ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅತಿಥಿಗಳಾಗಿ ಶ್ರೀ ವಿ. ಮುನಿರಾಜು, ವಲಯ ಅರಣ್ಯಾಧಿಕಾರಿಗಳು ದೊಡ್ಡಬಳ್ಳಾಪುರ, ಶ್ರೀಮತಿ ಲಕ್ಷ್ಮೀ, ಉಪ ವಲಯ ಅರಣ್ಯಾಧಿಕಾರಿಗಳು ದೊಡ್ಡಬಳ್ಳಾಪುರ, ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ರಾಜಮ್ಮ ಪ್ರಕಾಶ್ ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ನಾಗರಾಜ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಿ ಕೆ ಮೋಹನ್ ಬಾಬು, ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಶ್ರೀರಾಮಯ್ಯ, ಜಿಲ್ಲಾ ಆಯುಕ್ತರು (ವ.ಸಂ), ಪ್ರೌಢ ಶಾಲೆಯ 120 ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



## ಬೆಂಗಳೂರು ದಕ್ಷಿಣ

ಜೂನ್ 22 ರಿಂದ 28ರ ವರಗೆ ಡಾ॥ ಅನಿ ಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ಸ್ ಮಾಸ್ಟರ್, ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರವನ್ನು, ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರ ಒಟ್ಟು 6 ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತು. ಒಟ್ಟು 6 ಶಿಬಿರಗಳಲ್ಲಿ 164 ಶಿಬಿರಾರ್ಥಿಗಳು ಭಾಗವಹಿಸಿದರು. ಸ್ಕೌಟ್ಸ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ. (ಸ್ಕೌಟ್ಸ್) ಶಿಬಿರದ ನಾಯಕರಾಗಿದ್ದರು, 18 ಶಿಬಿರಾರ್ಥಿಗಳು ಭಾಗವಹಿಸಿದರು. ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಅರುಣಮಾಲ, ಎಲ್.ಟಿ. (ಗೈಡ್ಸ್) ಶಿಬಿರದ ನಾಯಕಿಯಾಗಿದ್ದರು. 13 ಶಿಬಿರಾರ್ಥಿಗಳು ಭಾಗವಹಿಸಿದರು. ಸ್ಕೌಟ್ಸ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಎಂ.ವಿ. ಜನಾರ್ಧನ್, ಎಲ್.ಟಿ. (ಸ್ಕೌಟ್ಸ್) ಶಿಬಿರದ ನಾಯಕರಾಗಿದ್ದರು. 41 ಶಿಬಿರಾರ್ಥಿಗಳು ಭಾಗವಹಿಸಿದರು. ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗಾಯತ್ರಿ ಜಿ., ಎ.ಎಲ್.ಟಿ. (ಗೈಡ್) ಶಿಬಿರದ ನಾಯಕಿಯಾಗಿದ್ದರು. 37 ಶಿಬಿರಾರ್ಥಿಗಳು ಭಾಗವಹಿಸಿದರು. ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗೌರಬಾಯಿ, ಎಲ್.ಟಿ. (ಫ್ಲಾಕ್) ಶಿಬಿರದ ನಾಯಕಿಯಾಗಿದ್ದರು. 26 ಶಿಬಿರಾರ್ಥಿಗಳು ಭಾಗವಹಿಸಿದರು. ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಕೃಷ್ಣಮೂರ್ತಿ, ಎ.ಎಲ್.ಟಿ. (ಕಬ್) ಶಿಬಿರದ ನಾಯಕರಾಗಿದ್ದರು. 29 ಶಿಬಿರಾರ್ಥಿಗಳು ಭಾಗವಹಿಸಿದರು.



* ಜೂನ್ 25 ರಂದು ಶಿಬಿರಕ್ಕೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ. (ಸ್ಕೌಟ್ಸ್) ಜಿಲ್ಲಾ ತರಬೇತಿ ಆಯುಕ್ತರು ಹಾಗೂ ಸ್ಕೌಟ್ಸ್ ಮುಂದುವರೆದ ತರಬೇತಿ ಶಿಬಿರದ ನಾಯಕರು ಎಲ್ಲಾ ಶಿಬಿರಗಳ ನಾಯಕರುಗಳು ಸಂಪನ್ಮೂಲ ವ್ಯಕ್ತಿಗಳು, ಶಿಬಿರದ ಸಹ ನಾಯಕ-ನಾಯಕಿಯರುಗಳು, ಶ್ರೀ ಚಂದ್ರು ಪಿ.,



ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್), ಶಿಬಿರಾರ್ಥಿಗಳು ಮತ್ತು ಸೇವಾ ರೋವರ್ಸ್-ರೇಂಜರಸ್‌ಗಳು ಭಾಗವಹಿಸಿದರು.

* ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಜೂನ್ 23 ರಿಂದ 27ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2022-23ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ, ರಾಜ್ಯ ಪುರಸ್ಕಾರ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಪೂರ್ವ ಸಿದ್ದತಾ ಶಿಬಿರ, ನಿಪುಣ್ ಪರೀಕ್ಷಾ ಶಿಬಿರ ಮತ್ತು ದ್ವಿತೀಯ ಸೋಪಾನ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ತೃತೀಯ ಸೋಪಾನ ಸ್ಕೌಟ್ಸ್ ವಿಭಾಕ್ಕೆ ಶ್ರೀ ರಿಯಾಜ್ ಪಾಷ ಎ.ಎಲ್.ಟಿ. (ಸ್ಕೌ) ನಾಯಕರಾಗಿದ್ದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಸುಶೀಲ ಮಹದೇವ್, ಪ್ರೀ-ಎ.ಎಲ್.ಟಿ.(ಗೈಡ್ಸ್) ನಾಯಕರಾಗಿದ್ದರು. ನಿಪುಣ್ ಪರೀಕ್ಷಾ ಶಿಬಿರಕ್ಕೆ ಶ್ರೀಮತಿ ಲತಾ ಮಂಜುನಾಥ್, ಅಡ್ವಾನ್ಸ್ ರೇಂಜರ್ಸ್, ಶ್ರೀ ಶಿವರಾಜು, ಅಡ್ವಾನ್ಸ್ ರೋವರ್ಸ್, ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ.(ಸ್ಕೌ) ಶಿಬಿರದ ನಿರ್ದೇಶಕರಾಗಿದರು. ಶಿಬಿರಕ್ಕೆ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಪಿ. ಪಳನಿ ಜಿಲ್ಲಾ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗಾಯತ್ರಿಗೌಡ, ಎಲ್.ಟಿ.(ಗೈ) ಭೇಟಿ ನೀಡಿದರು.



* ಜುಲೈ 8 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಮತ್ತು ದಳ ನಾಯಕರುಗಳಿಗೆ ಪರ್ವಲ್ ಸಾಟರ್ಡೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ರೋವರ್ಸ್-ರೇಂಜರ್ಸ್ ಸ್ಕೌಟ್ಸ್-ಗೈಟ್ಸ್ ಪ್ರಾವಿಣ್ಯತಾ ಪದಕಗಳು ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ 175 ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ಮತ್ತು ದಳ ನಾಯಕರುಗಳು ಭಾಗವಹಿಸಿದರು. ಕಾರ್ಯಕ್ರಮಕ್ಕೆ ಶ್ರೀ ಎಂ.ಕೆ.




ಖಾನ್, ಜಿಲ್ಲಾ ಮುಖ್ಯ ಆಯುಕತ್ತರು, ಶ್ರೀ ಪಳನಿ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ.(ಸ್ಕೌ) ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಜಿತೇಶ್ ಸೇಠ್, ಶ್ರೀ ಜೀತೇಶ್ ಹೆಚ್.ಡಬ್ಲ್ಯೂ.ಬಿ. (ಸ್ಕೌ) ವೈಟ್‌ಫೀಲ್ಡ್ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳು ಭೇಟಿ ನೀಡಿದರು.

* ಜುಲೈ 8 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ಹುಳಿಮಾವು ಶಾಖೆಯ ಆರ್ಕಿಡ್ ಶಾಲೆ ದಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಿಗಾಗಿ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ ಎ.ಎಲ್.ಟಿ.(ಗೈ) ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಸಂಪತ್ ಎ.ಎಲ್.ಟಿ.(ಸ್ಕೌ) ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಅನಿತಾ ದೇವರಾಜು, ದಳನಾಯಕರಾದ ಗ್ರೇಸ್ ಸುಪ್ರಿಯಾ ವೆಸ್ಲಿ, ಲೇಡಿ ಸ್ಕೌಟ್ಸ್ ಮಾಸ್ಟರ್, ಗ್ರಾಸ್ನೆಲಿನ್, ಲೇಡಿ ಸ್ಕೌಟ್ಸ್ ಮಾಸ್ಟರ್, ಸ್ಕೌಟ್ಸ್-ಗೈಡ್ಸ್ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

* ಜುಲೈ 8 ರಂದು ಸ್ಥಳಿಯ ಸಂಸ್ಥೆಯ ನರಗುಂದ ಅಂತರಾಷ್ಟ್ರೀಯ ಶಾಲೆಯಲ್ಲಿ ಸ್ಕೌಟ್ಸ್-ಗೈಡ್‌ಗಳ ಬಗ್ಗೆ ಪೋಷಕರಿಗೆ ಮಾಹಿತಿಯನ್ನು ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತ್ತು. ಕಾರ್ಯಕ್ರಮದಲ್ಲಿ ಶ್ರೀ ಬಿ.ವಿ. ಶೇಖರ್, ಎ.ಎಲ್.ಟಿ. (ಸ್ಕೌ), ಶ್ರೀಮತಿ ಐಶ್ವರ್ಯ, ಕೆ.ಎನ್., ಬಸವನಗುಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಸ್ಕೌಟಿಂಗ್-ಗೈಡಿಂಗ್ ಬಗ್ಗೆ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರು, ದಳ ನಾಯಕ-ನಾಯಕಿಯರು ಮತ್ತು ಪೋಷಕರು ಉಪಸ್ಥಿತರಿದರು.

* ಜುಲೈ 8 ರಂದು ವಿಜಯನಗರ ಸ್ಥಳಿಯ ಸಂಸ್ಥೆಯ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜುನಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು



ಆಯೋಜನೆ ಮಾಡಲಾಯಿತು. ವಿಜಯನಗರ ಸ್ಥಳಿಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸಿದ್ದಗಂಗಯ್ಯ, ಪ್ರೀ-ಎ.ಎಲ್.ಟಿ.(ಸ್ಕೌ) ಮುಖ್ಯ ಅಥಿತಿಗಳಾಗಿ ಉಪಸ್ಥಿತರಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀ ವೆಂಕಟೇಶಪ್ಪ, ಶ್ರೀಮತಿ ಭಾರತಿ, ಹೆಚ್.ಡಬ್ಲ್ಯೂ.ಬಿ. (ರೇಂ), ಶ್ರೀ ನಾಗರಾಜು ಅಡ್ವನ್ಸ್ ರೋವರ್ಸ್ ಸ್ಕೌಟ್ಸ್ ಲೀಡರ್, ಕಾಲೇಜಿನ ಉಪನ್ಯಾಸಕರು ಮತ್ತು ಉಪನ್ಯಾಸಕಿರು, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದರು.

## ಬೆಂಗಳೂರು ಉತ್ತರ

ಜುಲೈ 28 ರಂದು ಮಲ್ಲೇಶ್ವರಂ ಸ್ಥಳೀಯ ಸಂಸ್ಥೆಯ ಮಹಾ ಸಭೆಯು ಚಾಮುಂಡಿ ಸ್ಕೌಟ್ಸ್ ಮುಕ್ತದಳ ಆವರಣದಲ್ಲಿ ನಡೆಯಿತು. ಶ್ರೀಮತಿ ಗೀತಾನಟರಾಜ್, ರಾಜ್ಯಗೈಡ್ಸ್ ಆಯುಕ್ತರು ಹಿರಿಯ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನೇರವೇರಿಸಿದರು. ಹಿರಿಯ ನಾಯಕರಾದ ಶ್ರೀ ಚಂದ್ರಶೇಖರನ್‌ರವರು 2023-24ನೇ ಸಾಲಿನ ರಾಜ್ಯ ಯೋಜನ ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಮಯದಲ್ಲಿ ಜಿಲ್ಲಾ ಮಟ್ಟದ ರಜತ್‌ಗಿರಿ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಶಿಬಿರದ ನಾಯಕರಾಗಿ ಮೇರಿ ಪಿಲೋಮಿನ ಹಾಗೂ ಸಹ ನಾಯಕರಾಗಿ ಮೋನಿಷ ಶರ್ಮಾ, ಶ್ರೀಮತಿ ಸ್ನೇಹಾ ಹಾಗೂ ಜೆನ್ನಿಫರ್ ಇವರು ಸಹಕರಿಸಿದರು. ಕಾರ್ಯಕ್ರಮವನ್ನು ಮಲ್ಲೇಶ್ವರವ್ ಸ್ಥಳೀಯ ಸಂಸ್ಥೆಯುಗೌರವ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ನೇರವೆಸಿದರು.



* ಯಲಹಂಕ ಸ್ಥಳೀಯ ಸಂಸ್ಥೆ ವತಿಯಿಂದ ಜೂನ್ 29 ರಂದು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಯಲಹಂಕ ನ್ಯೂಟೌನ್ ಪಬ್ಲಿಕ್ ಸ್ಕೂಲ್ ಇಲ್ಲಿ ನೇರವೇರಿಸಲಾಯಿತು. ಶ್ರೀಮತಿ ಪೂರ್ಣಿಮ, ಶ್ರೀ ರಾಘವೇಂದ್ರ ಭಟ್, ಜಿಲ್ಲಾ ಜೊತೆ ಕಾರ್ಯದರ್ಶಿ ಶ್ರೀ ರಮೇಶ್ ಉಪಸ್ಥಿತರಿದ್ದರು. ಯಲಹಂಕ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮೋಹನ್ ಕುಮಾರ್ ಶಿಬಿರವನ್ನು ಸಂಘಟಿಸಿದರು.

* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ನಗರ ಪ್ರದೇಶ ವಿದ್ಯಾರ್ಥಿಗಳಿಗೆ ಕೃಷಿಯ ಬಗ್ಗೆ ಅರಿವು ಹಾಗೂ ಪ್ರಾತ್ಯಕ್ಷಿತೆ ಮತ್ತು ನೈಜ ಅನುಭವ ಪಡೆಯಲು ಜಿಲ್ಲಾ ಮಟ್ಟದ ಸ್ಕೌಟ್ ನಡಿಗೆ ಹಳ್ಳಿ ಕಡೆಗೆ ಎಂಬ ವಿನೂತನ ಶಿಬಿರವನ್ನು ಜುಲೈ 15 ಮತ್ತು 16 ರಂದು ರೋವರ್-ರೇಂಜರ್ಸ್‌ಗೆ ಉಡುಪಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮುನಿರಾಜ ರೆಂಜಾಳ, ಇವರು ತುಳುನಾಡಿನ ಚರಿತ್ರೆ,





ಕೃಷಿಯ ಮಹತ್ವದ ಬಗ್ಗೆ ಮಾಹಿತಿ ನೀಡಿ, ವಿದ್ಯಾರ್ಥಿಗಳೊಂದಿಗೆ ಕೃಷಿಯ ಬಗ್ಗೆ ಚರ್ಚಿಸಿದರು. ಕಾರ್ಕಳ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಗಣೇಶ್ ಜಾಲ್ಸೂರ್‌ರವರು ತುಳುನಾಡಿನ ಸಂಸ್ಕೃತಿ ಹಾಗೂ ಆಹಾರ ಪದ್ಧತಿ, ಇತರೆ ವಿಷಯದ ಬಗ್ಗೆ ಮಾಹಿತಿ ನೀಡಿದರು. ಶಿಬಿರದ ಬಗ್ಗೆ ಹಾಗೂ ಶಿಬಿರದ ನಿಯಮಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಯಿತು. ಮಂಜುನಾಥ ಪೈ ಮೆಮೋರಿಯಲ್ ಸರಕಾರಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕಿರಣ್‌ಕುಮಾರ್‌ರವರು ಶಿಬಿರದ ಉದ್ಘಾಟನೆ ನೆರವೇರಿಸಿ ಶಿಬಿರದ ಬಗ್ಗೆ ಮಾತನಾಡಿದರು. ಉದ್ಘಾಟನಾ ಕಾರ್ಯಕ್ರಮದ ಅತಿಥಿಗಳಾಗಿ ಉಡುಪಿ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಜೆ. ಪೈ, ಜಿಲ್ಲಾ ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ವಿವಿಧ ಕಾಲೇಜಿನ ರೇಂಜರ್ ಲೀಡರ್ಸ್‌ಗಳು ಉಪಸ್ಥಿತರಿದ್ದರು. ಶ್ರೀ ವಿತೇಶ್ ಕಾಂಚನ್ (HWB)ರವರು ಧನ್ಯವಾದವನ್ನು ತಿಳಿಸಿದರು. ಉಡುಪಿ ಗೈಡ್ ಆಯುಕ್ತೆ ಶ್ರೀಮತಿ ಜ್ಯೋತಿ ಜೆ. ಪೈ, ಅವರ ಭತ್ತದ ಗದ್ದೆಯಲ್ಲಿ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಕೃಷಿ ಶಿಬಿರವನ್ನು ಏರ್ಪಡಿಸಲಾಗಿತ್ತು. ಶ್ರೀಮತಿ ಜ್ಯೋತಿ ಜೆ. ಪೈ ಅವರು ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಕೃಷಿಯ ಬಗ್ಗೆ ಮಾಹಿತಿ ನೀಡಿದರು. ರೇಂಜರ್ಸ್ ಲೀಡರ್‌ಗಳು ವಿದ್ಯಾರ್ಥಿಗಳಿಗೆ ಹಳ್ಳಿ ಜನಪದ ಹಾಡು, ತುಳುಪಾಡ್ದನದ ಓ... ಬೇಲೆ ಹಾಗೂ ಇತರ ಹಾಡುಗಳನ್ನು ಹಾಡಿಸಿದರು. ತುಳುನಾಡಿನ ಹಳ್ಳಿ ಖಾದ್ಯಗಳನ್ನು ಕಾರ್ಕಳ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಶ್ರೀ ಎಂ. ವಿಜಯಕುಮಾರ್ ಇಂತಹ ಕಾರ್ಯಕ್ರಮವನ್ನು ಪ್ರತಿವರ್ಷ ಹಮ್ಮಿಕೊಳ್ಳುವಂತೆ ಕರೆಕೊಟ್ಟರು.

* ಜುಲೈ 12 ರಂದು ಆರ್.ಟಿ.ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ 2023–24ನೇ ಸಾಲಿನ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಶಿಕ್ಷಕರ ಕಾರ್ಯಾಗಾರ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್ ನೇರವೇರಿಸಿದರು. ಜಿಲ್ಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ಸೇವೆ ಸಲ್ಲಿಸಿದ ಹಿರಿಯ ನಿವೃತ್ತ ಶಿಕ್ಷಕರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಶ್ರೀಮತಿ ಮಂಜುಳ, ರಾಜ್ಯ ಸಂಘಟಾನ ಆಯುಕ್ತರು (ಗೈಡ್ಸ್) ಇವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶಿಕ್ಷಕರರಿಗೆ ರಾಜ್ಯ ಮಟ್ಟದ ಕಾರ್ಯಕ್ರಮ ಹಾಗೂ 2023–24ನೇ ಸಾಲಿನ ವಾರ್ಷಿಕ ಯೋಜನೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮವನ್ನು ಮಲ್ಲೇಶ್ವರಂ ಸ್ಥಳೀಯ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ನೇರೆವೆಸಿದರು. ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್) ಶ್ರೀ ಸತ್ಯಜೀತ್ ಚಟರ್ಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾರಿಗೂ ಧನ್ಯವಾದ ಸಲ್ಲಿಸಿದರು. ಕಾರ್ಯಗಾರದಲ್ಲಿ ಮುಖ್ಯವಾಗಿ, 2023–24ನೇ ಸಾಲಿನ ವಾರ್ಷಿಕ ಚಟುವಟಿಕೆಯು ಬಗ್ಗೆ, ಯು.ಐ.ಡಿ., ಸುಸ್ಥಿರ ಅಭಿವೃದ್ದಿಯು ಕಾರ್ಯಸೂಚಿಯ ಬಗ್ಗೆ, ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಪರೀಕ್ಷಾ ಶಿಬಿರದ ಬಗ್ಗೆ, ಇತರ ಸೇವಾ ಶಿಬಿರದ ಬಗ್ಗೆ ಮಾಹಿತಿ ನೀಡಲಾಯಿತು. ವಾರೆಂಟ್ ಚಾರ್ಟರ್ ಹಂಚಲಾಯಿತು. ಶಿಬಿರದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

* ಜುಲೈ 13 ರಂದು ಆರ್.ಟಿ.ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ 2023–24ನೇ ಸಾಲಿನ ಜಿಲ್ಲಾ ಮಟ್ಟದ ಕಬ್ ಮಾಸ್ಟರ್ ಬುಲ್‌ಬುಲ್ ಶಿಕ್ಷಕರ ಕಾರ್ಯಾಗಾರ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನಕುಮಾರ್ ನೇರವೇರಿಸಿದರು. ಜಿಲ್ಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ಸೇವೆ ಸಲ್ಲಿಸಿದ ಹಿರಿಯ ನಿವೃತ್ತ ಶಿಕ್ಷಕರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ಸ್ಕೌಟಿಗೆ ಎಲ್ಲಾ ರೀತಿಯ ಸಹಕರ ನೀಡಿರುವ ಹಿರಿಯರಾದ ಶ್ರೀ ಚಂದ್ರಶೇಖರನ್ ಹಾಗೂ







ಅವರ ಧರ್ಮಪತ್ನಿಯನ್ನು ಜಿಲ್ಲಾ ಸಂಸ್ಥೆ ವತಿಯಿಂದ ಗೌರವಿಸಲಾಯಿತು. ಶ್ರೀಮತಿ ಸಾರುಮತಿ ಇವರನ್ನು ಗೌರವಿಸಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮವನ್ನು ಮಲ್ಲೇಶ್ವರಮ್ ಸ್ಥಳೀಯ ಸಂಸ್ಥೆಯ ಗೌರವ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ನೇರವೇಸಿದರು. ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ಸ್ ಶ್ರೀ ಶ್ರೀ ಸತ್ಯಜೀತ್ ಚಟರ್ಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು.

* ಜಿಲ್ಲೆ ವತಿಯಿಂದ ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಕಾರ್ಯಕ್ರಮದಡಿಯಲ್ಲಿ 12ನೇ ತಿಂಗಳ ಕಾರ್ಯಕ್ರಮದಡಿಯಲ್ಲಿ ಜೂನ್ 29 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ ರೋವರ್ಸ್‌ಗಳು ಭಾಗವಹಿಸಿದ್ದರು.

* ಕರ್ನಾಟಕ ಸರ್ಕಾರದ ಮಾಜಿ ಗೃಹ ಸಚಿವರು, ಉನ್ನತ ಶಿಕ್ಷಣ ಸಚಿವರಾದ ದಿ॥ ಡಾ. ವಿ.ಎಸ್. ಆಚಾರ್ಯರವರ 84ನೇ ಹುಟ್ಟು ಹಬ್ಬದ ಅಂಗವಾಗಿ ಜುಲೈ 06 ರಂದು ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಜಿಲ್ಲಾ ಕಾರ್ಯದರ್ಶಿಯಾಗಿರುವ ಶ್ರೀ ಬಿ.ಕೆ. ಶೇಷಾದ್ರಿ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮ ಚಾಲನೆ ನೀಡಿದರು.



## ಬೀದರ್

ಜುಲೈ 24 ರಂದು ಅರಣ್ಯ ಇಲಾಖೆ ಬೀದರ್ ಹಾಗೂ ಪ್ರಾದೇಶಿಕ ಅರಣ್ಯ ವಲಯ ಭಾಲ್ಕಿ ಇವರ ಸಹಯೋಗದಲ್ಲಿ ಸರ್ಕಾರಿ ಪ್ರೌಢಶಾಲೆ ಬಸವೇಶ್ವರ ವೃತ್ತ ಮತ್ತು ಬಿ.ಕೆ.ಐ.ಟಿ. ಕಾಲೇಜು ಆವರಣದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾದ ಸನ್ಮಾನ್ಯ ಶ್ರೀ ಈಶ್ವರ ಖಂಡ್ರೆ ಅವರು ವನಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡಿ "5 ಕೋಟಿ ಸಸಿಗಳನ್ನು ನೆಡೋಣ, ಕರ್ನಾಟಕದಲ್ಲಿ ಹಸಿರು ಹೊದಿಕೆ ಮಾಡೋಣ" ಎಂಬ ಸಂದೇಶವನ್ನು ನೀಡಿದರು. ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲಾಧಿಕಾರಿ ಶ್ರೀ ಗೋವಿಂದ ರೆಡ್ಡಿ, ಶ್ರೀಮತಿ ಶಿಲ್ಪ ಎಂ., ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಅರಣ್ಯ ಅಧಿಕಾರಿಗಳು ಶಾಲಾ ಪದಾಧಿಕಾರಿಗಳು ಪರಿಸರ ಪ್ರೇಮಿಗಳು, ಸರಕಾರಿ ಪ್ರೌಢಶಾಲೆ ಸ್ಕೌಟ್-ಗೈಡ್ಸ್ ಮಕ್ಕಳು ಸದ್ಗುರು ಶಾಲೆಯ ಸ್ಕೌಟ್-ಗೈಡ್ಸ್ ಮಕ್ಕಳು ಮತ್ತು ಶಿಕ್ಷಕರು ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.



## ಚಿತ್ರದುರ್ಗ

"ಮನೆಗೊಂದು ಮರ ಊರಿಗೊಂದು ವನ" ಎಂಬ ನಾಣ್ಣುಡಿಯಂತೆ ನಾಡಿನ ಪ್ರತಿಯೊಬ್ಬ ಪ್ರಜೆಯು ಪ್ರತಿಯೊಂದು ಮನೆಯ ಮುಂದೆ ಒಂದು ಸಸಿ ನೆಟ್ಟು ಪಾಲನೆ ಪೋಷಣೆ ಮಾಡಿದಾಗ ಮಾತ್ರ ಪರಿಸರ ದಿನಾಚರಣೆಗೆ ಅರ್ಥ ಬರುತ್ತದೆ. ಜೊತೆಗೆ ಪರಿಸರ ಉಳಿವಿಗೆ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಅರಣ್ಯ ಉಪಸಂರಕ್ಷಣಾಧಿಕಾರಿ ಶ್ರೀ ರಾಜಣ್ಣ ಹೇಳಿದರು. ಅರಣ್ಯ ಇಲಾಖೆ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಚಿತ್ರದುರ್ಗ ಹಾಗೂ ರೆಡ್‌ಕ್ರಾಸ್ ಸಂಸ್ಥೆ ವತಿಯಿಂದ ಜುಲೈ 07 ರಂದು ಆಯೋಜಿಸಿದ್ದ



ವನ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಲಯ ಅರಣ್ಯಾಧಿಕಾರಿ ಶ್ರೀಮತಿ ಉಷಾರಾಣಿ ಮಾತನಾಡಿ, "ಇಂದಿನ ದಿನಮಾನಗಳಲ್ಲಿ ಪರಿಸರದ ಬಗ್ಗೆ ಕಾಳಜಿ ಮಕ್ಕಳಲ್ಲಿ ಕಡಿಮೆ ಆಗುತ್ತಿದ್ದು ಮೊಬೈಲ್ ಬಳಕೆಯಿಂದ ಪಕ್ಷಿ ಸಂಕುಲ ನಶಿಸುತ್ತಿದೆ" ಎಂದು ಬೇಸರ ವ್ಯಕ್ತ ಪಡಿಸಿದರು. ನಂತರ 10,000 ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಅರಣ್ಯ ಅಧಿಕಾರಿ ಶ್ರೀ ವಾಸುದೇವ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಚೇರ್ಮನ್ ಶ್ರೀ ಮಹೇಂದ್ರನಾಥ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನಜಿಲ್ಲಾ ಸಂಘಟಕರಾದ ಪಾಟೀಲ್, ಅರಣ್ಯ ಇಲಾಖೆ ಸಿಬ್ಬಂದಿಗಳು ಸೇರಿದಂತೆ ಸ್ಕೌಟ್, ರೋವರ್ಸ್, ರೇಂಜರ್ಸ್ ಮಕ್ಕಳು ಭಾಗವಹಿಸಿದ್ದರು.

## ದಾವಣಗೆರೆ

ಜೂನ್ 21 ರಂದು ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ನಯನ ಏಸುಪ್ರಿಯ ಯೋಗಾಸನ ಮಹತ್ವವನ್ನು ಮಕ್ಕಳಿಗೆ ತಿಳಿಸಿದರು.

* ಜೂನ್ 21 ರಂದು ಮಾಗನೂರು ಬಸಪ್ಪ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಯೋಗಾಸನ ಮಾಡುವುದರೊಂದಿಗೆ ವಿಶ್ವಯೋಗ ದಿನಾಚರಣೆಯನ್ನು ಆಚರಿಸಿದರು. ಶಾಲೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು, ಸ್ಕೌಟ್ ಮಾಸ್ಟರ್‌ಗಳು ಉಪಸ್ಥಿತರಿದ್ದರು.

* ಜೂನ್ 21 ರಂದು ತರಳಬಾಳು ಶಾಲೆಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯಸ್ಥರು, ಮುಖ್ಯೋಪಾಧ್ಯಾಯರುಗಳು, ಸ್ಕೌಟ್ ಮಾಸ್ಟರ್ಸ್ ಗೈಡ್ ಕ್ಯಾಪ್ಟನ್ಸ್‌ಗಳೊಂದಿಗೆ ಯೋಗ ಮಾಡಿದರು.

* ಜೂನ್ 21 ರಂದು ಎಸ್.ವಿ.ಎಸ್. ಕಾನ್ವೆಂಟ್ ಶಾಲೆಯಲ್ಲಿ ವಿಶ್ವಯೋಗ ದಿನಾಚರಣೆಯನ್ನು ಆಚರಿಸಲಾಯಿತು.

* ಜೂನ್ 21 ರಂದು ವಿಶ್ವಯೋಗ ದಿನಾಚರಣೆಯನ್ನು ಸಿದ್ದಗಂಗಾ ಶಾಲೆಯಲ್ಲಿ ಆಚರಿಸಲಾಯಿತು. ಸಿದ್ದಗಂಗಾ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಸ್ಕೌಟ್ ಮಾಸ್ಟರ್‌ಗಳು, ಗೈಡ್ ಕ್ಯಾಪ್ಟನ್ಸ್‌ಗಳೊಂದಿಗೆ ಯೋಗ ಮಾಡಿದರು.

* ಜೂನ್ 24 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಸಂಚಾರಿ ಪೊಲೀಸರಿಂದ ಸಂಚಾರಿ ನಿಯಮಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.



* ಜೂನ್ 25 ರಂದು ತರಳಬಾಳು ಶಾಲೆಯಲ್ಲಿ ಸಂಚಾರಿ ಪೊಲೀಸರಿಂದ ಸಂಚಾರಿ ನಿಯಮಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್, ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು.

* ಜೂನ್ 26 ರಿಂದ 29ರ ವರೆಗೆ ಚನ್ನಗಿರಿ ಸ್ಥಳೀಯ ಸಂಸ್ಥೆಯ ಎಸ್.ಎಸ್.ಎಸ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿಯಲ್ಲಿ ರಾಜ್ಯಮಟ್ಟದ ಪ್ರೇರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ರಾಜ್ಯ ವಿವಿಧ ಜಿಲ್ಲೆಗಳ ಸುಮಾರು 266 ರೇಂಜರ್ಸ್‌ಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಹಾಲಸಿದ್ದಪ್ಪ, ಪ್ರಾಂಶುಪಾಲರು ವಹಿಸಿದ್ದರು. ದಿವ್ಯಸಾನಿಧ್ಯವನ್ನು ಪರಮಪೂಜ್ಯ ಶ್ರೀಶ್ರೀಶ್ರೀ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ವಹಿಸಿ ವಿದ್ಯಾರ್ಥಿಗಳಿಗೆ ಸಮಯ ಹಾಗೂ ಸೇವೆಯ ಮಹತ್ವನ್ನು ತಿಳಿಸಿದರು. ಕಾರ್ಯಕ್ರಮವನ್ನು ಡಾ॥ ಬಸವರಾಜ ಡಿ. ಕುಂಬಾರ್ ಕುಲಪತಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಉದ್ಘಾಟಿಸಿದರು. ವಿಶೇಷ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ, ಬೆಂಗಳೂರು ಇವರು ಭಾಗವಹಿಸಿದ್ದರು. ಅತಿಥಿಗಳಾಗಿ ಶ್ರೀ ಜಯಪ್ರಕಾಶ್ ಜೆ. ಚಿಗಟೇರಿ, ಜಿಲ್ಲಾ ಅಧ್ಯಕ್ಷರು, ಶ್ರೀಮತಿ ಶಾಂತಾ ಎಸ್. ಯಾವಗಲ್,





ಜಿಲ್ಲಾ ಉಪಾಧ್ಯಕ್ಷರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಓಂಕಾರಪ್ಪ, ಚನ್ನಗಿರಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿನುಡಿದರು. ಡಾ॥ ಶಕುಂತಲಾ, ರೇಂಜರ್ ಲೀಡರ್ ಸ್ವಾಗಿತಿಸಿದರು. ಡಾ॥ ಪ್ರಕಾಶ್, ರೋವರ್ ಸ್ಕೌಟ್ ಲೀಡರ್ ವಂದನಾರ್ಪಣೆಯನ್ನು ನಡೆಸಿಕೊಟ್ಟರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ನಿರೂಪಣೆ ಮಾಡಿದರು.

* ಜುಲೈ 01 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜಾಥಾವನ್ನು ಆಯೋಜಿಸಲಾಗಿತ್ತು.

* ಜುಲೈ 02 ರಂದು ವರ್ಚ್ಯೂಯಲ್ ಶಿಬಿರಾಗ್ನಿ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಶ್ರೀ ಪರ್ನಾಂಡಿಸ್, ಎಲ್.ಟಿ. (ಸ್ಕೌಟ್) ವಿಶೇಷ ಅತಿಥಿಗಳಾಗಿ ಭಾಗವಹಿಸಿ ಪರಿಸರರಕ್ಷಣೆ ಬಗ್ಗೆ ಮಾತನಾಡಿದರು. ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಹಾಡು, ನೃತ್ಯ ಮತ್ತು ಕಿರು ನಾಟಕಗಳ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಶಾಂತ ಎಸ್. ಯಾವಗಲ್, ಸಂಪಾದಕರು, ಜಿಲ್ಲಾ ವಾರ್ತಾ ಪತ್ರಿಕೆ, ಡಾ॥ ಶಕುಂತಲಾ, ರೇಂಜರ್ ಲೀಡರ್ ಭಾಗವಹಿಸಿದ್ದರು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಮತ್ತು ಶ್ರೀ ಮುಸ್ತ ಫಯುವ, ಸಮಿತಿ ಅಧ್ಯಕ್ಷರು ಕಾರ್ಯಕ್ರಮವನ್ನು ಆಯೋಜಿಸಿದ್ದರು.

* ಜುಲೈ 05 ರಂದು ದಾವಣಗೆರೆ ಜಿಲ್ಲೆಯ ವಿವಿಧ ಇಲಾಖೆಗಳಿಗೆ ಭೇಟಿ ನೀಡಿ ರಾಜ್ಯ ಸಂಸ್ಥೆಯಿಂದ ಬಂದಿರುವ ವಾರ್ಷಿಕ ಯೋಜನಾ ಕಾರ್ಯಕ್ರಮಗಳ ಪುಸ್ತಕಗಳನ್ನು ವಿತರಿಸಲಾಯಿತು.

* ಜುಲೈ 06 ರಂದು ದಾವಣಗೆರೆ ಜಿಲ್ಲಾ ಸಂಸ್ಥೆಯಲ್ಲಿ ದಿವಂಗತ ಡಾ॥ ವಿ.ಎಸ್. ಆಚಾರ್ಯ ಅವರ ಹುಟ್ಟು ಹಬ್ಬದ ದಿನವನ್ನು ಡಿ.ಆರ್.ಎಂ. ಸ್ಕೌಟ್ ಭವನದ ಆವರಣದಲ್ಲಿ ಸಸಿ ನೆಡುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಉಪಸ್ಥಿತರಿದ್ದರು.

* ಜುಲೈ 06 ರಂದು ದಿವಂಗತ ಡಾ ವಿ.ಎಸ್. ಆಚಾರ್ಯಅವರ ಹುಟ್ಟುಹಬ್ಬವನ್ನು ಆರ್.ವಿ.ಜಿ.ಕೆ. ಪ್ರೌಢಶಾಲೆ, ಜೈನ್ ವಿದ್ಯಾಲಯ, ಸೆಂಟ್ ಪಾಲ್ಸ್ ಕಾನ್ವೆಂಟ್, ಗ್ಲೋಬಲ್ ಶಾಲೆಯಲ್ಲಿ ಸಸಿ ನೆಡುವ ಮೂಲಕ ಆಚರಿಸಲಾಯಿತು. ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜುಲೈ 15 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ವಿಪತ್ತು ನಿರ್ವಹಣ ತಂಡದ ವತಿಯಿಂದ ಪ್ರಕೃತಿ ವಿಕೋಪ ಅನಾಹುತಗಳು ಸಂಭವಿಸಿದಾಗ ಹೇಗೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಮಕ್ಕಳಿಗೆ ಪ್ರಾತ್ಯಕ್ಷಿಕೆ




ಮೂಲಕ ತಿಳಿಸಿಕೊಡಲಾಯಿತು. ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಶ್ರೀ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಶ್ರೀ ವೆಂಕಟಾಚಲ ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಶಾಲೆಯ ಮುಖ್ಯಸ್ಥರು, ಮುಖ್ಯೋಪಾಧ್ಯಾಯರುಗಳು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

## ಧಾರವಾಡ

ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಶಿವಾನಂದ ಭಜಂತ್ರಿ ಇವರು ರಾಜ್ಯ ವಾರ್ಷಿಕಯೋಜನಾ ಪುಸ್ತಕ 2023 ಬಿಡುಗಡೆಗೊಳಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಕುಲಪತಿಗಳಾದ ಶ್ರೀ ಕೆ.ಬಿ. ಗುಡಸಿ ಇವರು ರಾಜ್ಯ ವಾರ್ಷಿಕಯೋಜನಾ ಪುಸ್ತಕ 2023 ಬಿಡುಗಡೆಗೊಳಿಸಿ ಶುಭ ಕೋರಿದರು. ಪ್ರಾಂತೀಯ ಜಂಟಿ ನಿರ್ದೇಶಕರು ಆದ ಶ್ರೀ ಹನುಮಂತಪ್ಪ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ 2023 ಬಿಡುಗಡೆಗೊಳಿಸಿದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಆದ ಶ್ರೀಮತಿ ಶಶಿಕಲಾ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ 2023 ಬಿಡುಗಡೆಗೊಳಿಸಿದರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರು ಆದ ಶ್ರೀ ಎಸ್.ಎಸ್. ಕೆಳದಿಮಠ ಇವರು ರಾಜ್ಯ ವಾರ್ಷಿಕ ಯೋಜನಾ ಪುಸ್ತಕ 2023 ಬಿಡುಗಡೆಗೊಳಿಸಿದರು. ಇದೆ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸಹ ಭಾಗಹಿಸಿದರು.





## ಹಾಸನ

ಜಿಲ್ಲಾ ಸಂಸ್ಥೆ ಹಾಸನ ದಲ್ಲಿ 9ನೇ ವಿಶ್ವಯೋಗ ದಿನವನ್ನು ಆಚರಣೆ ಮಾಡಲಾಯಿತು ಯೋಗ ತರಬೇತಿಯು ಜಿಲ್ಲಾ ಕಾರ್ಯದರ್ಶಿ ಹಾಗೂ ಯೋಗ ಶಿಕ್ಷಕರಾದ ಶ್ರೀ ಸುರೇಶ್ ಗುರೂಜಿರವರ ನೇತೃತ್ವದಲ್ಲಿ ನಡೆಯಿತು. ಈ ಸಂಧರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ವೈ.ಎಸ್. ವೀರಭದ್ರಪ್ಪ, ಜಿಲ್ಲಾ ತರಬೇತಿ ಆಯುಕ್ತರುಗಳಾದ ಶ್ರೀ ಎಂ.ಎಸ್. ಪ್ರಕಾಶ್, ಶ್ರೀಮತಿ ಕಾಮೇಶ್ವರಿ ಭಟ್, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಕಾಂಚನಮಾಲ, ಸಹಾಯಕ ಜಿಲ್ಲಾ ಆಯುಕ್ತರು. ಶ್ರೀ ಆರ್.ಎಸ್. ರಮೇಶ್, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀಮತಿ ಪ್ರಿಯಾಂಕ ಹಾಗೂ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್‌ಗಳಾದ ಶ್ರೀ ಗಂಗನಾಯ್ಕ, ಶ್ರೀಮತಿ ಗುಣವತಿ, ಶ್ರೀಮತಿ ಚಾಂಪರಾಣಿ, ಶ್ರೀ ಜ್ಯೋತಿ, ಶ್ರೀಮತಿ ದಿವ್ಯ ಹಾಗೂ 250 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಯೋಗವನ್ನು ಮಾಡುವುದರ ಜೊತೆಯಲ್ಲಿ ಯೋಗಸನದ ಪ್ರಯೋಜನಗಳನ್ನು ಪಡೆದುಕೊಂಡುರು.



## ಕೊಡಗು

ಕೊಡಗು ಜಿಲ್ಲಾ ಸಂಸ್ಥೆಯ ವತಿಯಿಂದ 9ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಕರ್ನಾಟಕ ಸರಕಾರ ಕಾರಾಗೃಹ ಮತ್ತು ಸುಧಾರಣಾ ಸೇವೆ ಜಿಲ್ಲಾ ಕಾರಾಗೃಹ ಮಡಿಕೇರಿ ಹಾಗೂ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಮಡಿಕೇರಿ ಇವರುಗಳ ಸಹಯೋಗದೊಂದಿಗೆ "ವಸುಧೈವ ಕುಟುಂಬಕ್ಕಾಗಿಯೋಗ" ಎಂಬ ಧ್ಯೇಯ ವಾಕ್ಯದೊಂದಿಗೆ ಮಡಿಕೇರಿಯ ಕಾರಾಗೃಹ ಬಂದಿ ನಿವಾಸಿಗಳೊಂದಿಗೆ ಆಚರಿಸಲಾಯಿತು. ಮೊದಲಿಗೆ ಮಾತನಾಡಿದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಅವರು "ಈ



ಯೋಗವು ಎಲ್ಲರ ಮನಸ್ಸನ್ನು ಕೇಂದ್ರೀಕರಿಸುತ್ತದೆ ಮತ್ತು ನಮ್ಮ ಮನಸ್ಸನ್ನು ಪರಿವರ್ತಿಸುತ್ತದೆ. ಇದನ್ನು ತಮ್ಮ ದಿನ ನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡರೆ ನೀವುಗಳು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬದಲಾಗಬಹುದು" ಎಂದು ನುಡಿದರು ಈ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರಾಗೃಹ ಮಡಿಕೇರಿಯ ಅಧೀಕ್ಷಕರಾದ ಶ್ರೀ ಸಂಜಯ್ ಜತ್ತಿ ಮಾತನಾಡಿ "ಇಲ್ಲಿ ಇರುವ ಕೈದಿಗಳು ಯಾವುದೋ ಕಾರಣಕ್ಕಾಗಿ ಅಪರಾಧ ಮಾಡಿ ಕೈದಿಗಳಾಗಿ ಬಂದಿದ್ದೀರಿ ಆದರೆ ದಿನ ನಿತ್ಯ ನಿಮ್ಮ ಕೆಲವೊಂದು ಸಮಸ್ಯೆಗಳನ್ನು ನಾವು ಹತ್ತಿರದಿಂದ ನೋಡುತಿದ್ದು ಇದಕ್ಕೆಲ್ಲ ಪರಿಹಾರವಾಗಿ ಯೋಗ ಮತ್ತು ಧ್ಯಾನ ಮಾಡುವುದರಿಂದ ನಿಮ್ಮ ಆರೋಗ್ಯ ಮತ್ತು ಮನಸ್ಸು ಎರಡೂ ಶುದ್ದಿಯಾಗಿ ಇಲ್ಲಿಂದ ಬಿಡುಗಡೆಯಾಗಿ ಹೋದ ಸಂದರ್ಭ ನೀವುಗಳೂ ಕೂಡ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ತಮ್ಮನ್ನು ತಾವು ಗುರುತಿಕೊಳ್ಳಲು ಸಹಕಾರಿಯಾಗಲಿದೆ" ಎಂದು ನುಡಿದರು.

ನಂತರ ಮಾತನಾಡಿದ ಬ್ರಹ್ಮಕುಮಾರಿ ಧನಲಕ್ಷ್ಮಿಯವರು "ಯೋಗ ಮಾಡುವುದರಿಂದ ನಮ್ಮ ಶಾರೀರಕವಾಗಿ ಬಾಹ್ಯ ಸಮಸ್ಯೆಗಳು ಬಾರದಂತೆ ನೋಡಿಕೊಳ್ಳಬಹುದು ನಮ್ಮ ಭಾರತ ದೇಶದಲ್ಲಿ ಅತೀ ಹೆಚ್ಚು ಕಾಲ ಬದುಕಿದ ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಶ್ರೀ ಶಿವಾನಂದ ಯೋಗಿ ಅವರು ಬರೋಬರಿ 125 ವರ್ಷ ಬದುಕಿದ್ದರು. ಇವರು ಪ್ರತಿದಿನ ತಪ್ಪದೆ ಯೋಗ ಮಾಡುತ್ತಿದ್ದರು" ಎಂದರು. ನಂತರ ಮಾತನಾಡಿದ ಅರ್ಜುನ ಪ್ರಶಸ್ತಿ ವಿಜೇತ ಯೋಗ ತರಬೇತುದಾರೆ ಶ್ರೀ ಅಲೀಮಾ. ಪಿ.ಹೆಚ್. ಅವರು "ಯೋಗ ಮಾಡುವುದರಿಂದ ನಮ್ಮ ಆಯಸ್ಸು ಮತ್ತು ಆರೋಗ್ಯವನ್ನು ಹೆಚ್ಚಿಸಿಕೊಳ್ಳಬಹುದು ಮತ್ತು ನಾನು ಇಲ್ಲಿ ತೋರಿಸಿ ಕೊಡುವ ಸರಳ ಆಸನಗಳನ್ನು ನೀವು ಪ್ರತಿದಿನ ಎದ್ದ ಕೂಡಲೆ ಪಾಲಿಸಿದರೆ ನಿಮಗೆ ಸಹಜವಾಗಿ ಬರುವ ದೇಹದ ಸಮಸ್ಯೆಗಳಾದ ಮಂಡಿ ನೋವು, ಬೆನ್ನುನೋವು, ಕೈಕಾಲುಗಳ ಸ್ನಾಯು ಸೆಳೆತ ಇತ್ಯಾದಿಗಳನ್ನು ಹೋಗಲಾಡಿಸಬಹುದು" ಎಂದು ಹೇಳುವುದರೊಂದಿಗೆ ಕೆಲವೊಂದು ಸರಳ ಆಸನಗಳನ್ನು ಕೈದಿಗಳಿಗೂ ಮಾಡಿಸಿ ತರಬೇತಿ ನೀಡಿದರು. ಕಾರ್ಯಕ್ರಮವನ್ನು ಕಾರಾಗೃಹದ ವಾರ್ಡರ್ ಶ್ರೀ ಮಹಾಂತೇಶ್ವರವ ಗೋಳ್ ಅವರು ನಿರೂಪಿಸಿದರೆ ಶ್ರೀಮತಿ ಯು.ಸಿ. ದಮಯಂತಿ, ಜಿಲ್ಲಾ ಸಂಘಟಕರು ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಕೊಡಗು ಇವರು ವಂದಿಸಿದರು. ಶ್ರೀ ರವಿ ಮುತ್ತಪ್ಪ ಬಂಡಿವಡ್ಡರ್, ಜೈಲರ್ ಜಿಲ್ಲಾ ಕಾರಾಗೃಹ ಮಡಿಕೇರಿ, ಶ್ರೀಮತಿ ಹೆಚ್.ಟಿ. ಲತಾ, ಸಹಾಯಕ ಜೈಲರ್ ಜಿಲ್ಲಾ ಕಾರಾಗೃಹ ಮಡಿಕೇರಿ ಹಾಗೂ ಬ್ರಹ್ಮಕುಮಾರಿ ಶ್ರೀಮತಿ ಬಿ.ಕೆ. ಹರಿಣಾಕ್ಷಿ, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

* ಜುಲೈ 03 ರಂದು ಜಿಲ್ಲಾ ಸಂಸ್ಥೆ ಕೊಡಗು, ಭಾರತೀಯ ವಿದ್ಯಾಭವನ ಕೊಡಗು ವಿದ್ಯಾಲಯ, ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಕೊಡಗು ವಿದ್ಯಾಲಯ ಆಭರಣದಲ್ಲಿ ವನಮೋತ್ಸವವನ್ನು ಗಿಡ ನೆಡುವುದರ ಮೂಲಕ ಆಚರಿಸಲಾಯಿತು. ಮೊದಲಿಗೆ ಸಭಾ ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಾದ ಡಾ॥ ಆಕಾಶ್‌ರವರು ಗಿಡಕ್ಕೆ




ನೀರು ಹಾಕುವುದರ ಮೂಲಕ ವನಮೋತ್ಸವಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು "ವನಮಹೋತ್ಸವ ಸಂದರ್ಭದಲ್ಲಿ ಮಾತ್ರ ಗಿಡವನ್ನು ನೆಟ್ಟರೆ ಸಾಲುವುದಿಲ್ಲ ಯಾವಾಗಲೂ ಕೂಡ ನಮ್ಮಲ್ಲಿ ಪರಿಸರ ಪ್ರಜ್ಞೆ ಮೂಡಬೇಕು" ಎಂದು ತಿಳಿಸಿದರು. ನಂತರ ಮಾತನಾಡಿದ ಶ್ರೀ ಬಿ.ಎನ್.ಎನ್. ಮೂರ್ತಿ, ಅರಣ್ಯ ಸಂರಕ್ಷಣಾಧಿಕಾರಿಗಳು ಕೊಡಗು ವೃತ್ತ, ಮಡಿಕೇರಿ ಇವರು "ಮರ ಗಿಡಗಳನ್ನು ನೆಟ್ಟು ಅರಣ್ಯ ಉಳಿದರೆ ಮಾತ್ರವೇ ನದಿಗಳು ಉಳಿಯುತ್ತವೆ. ನದಿ ಮೂಲಗಳು ಇರುವುದೇ ಅರಣ್ಯ ಪ್ರದೇಶದಲ್ಲಿ ಎಂಬುದನ್ನು ಎಲ್ಲರೂ ಗಮನಿಸಬೇಕು" ಎಂದರು. ಇದೇ ಸಂದರ್ಭ ಜಿಲ್ಲೆಯಿಂದ ವರ್ಗಾವಣೆಗೊಂಡು ಹೋಗುತ್ತಿರುವ ಇವರನ್ನು ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಸನ್ಮಾನಿಸಿದರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಮಾತನಾಡಿ "ಇದು ಪರಿಸರವು ಮಲಿನಗೊಳ್ಳುತ್ತಿದೆ, ಪರಿಸರವನ್ನು ಸಂರಕ್ಷಿಸುವುದು ಎಲ್ಲರ ಕರ್ತವ್ಯವಾಗಿದೆ, ಅದರಲ್ಲೂ ಎಲೆ ಮಕ್ಕಳಲ್ಲಿ ಪರಿಸರ ಜಾಗೃತಿ ಮೂಡಿಸುವುದು ದೊಡ್ಡವರಾದ ನಮ್ಮೆಲ್ಲರ ಕರ್ತವ್ಯವಾಗಿದೆ" ಎಂದು ನುಡಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಆಗಮಿಸಿರುವ ಶ್ರೀಮತಿ ಸೌಮ್ಯರವರು ಮಾತನಾಡಿ "ಗಿಡ ಮರ ನೆಟ್ಟು ಪರಿಸರವನ್ನು ಯಾವಾಗಲೂ ಹಸಿರಾಗಿ ಇಟ್ಟಲ್ಲಿ ಒಳ್ಳೆಯ ಗಾಳಿ, ನೀರು, ಅಲ್ಲದೆ ಮಾನವನಿಗೆ ಒಳ್ಳೆಯ ಆರೋಗ್ಯವು ಲಭಿಸುತ್ತದೆ" ಎಂದರು. ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತ ಹಾಗೂ ಗೈಡ್ ಆಯುಕ್ತರು ಆಗಿರುವ ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ. ಪೂವಯ್ಯ, ಸ್ಕೌಟ್ಸ್-ಗೈಡ್ಸ್‌ನ ಸ್ಥಾನಿಕ ಆಯುಕ್ತರಾದ ಶ್ರೀ ಎಚ್.ಆರ್. ಮುತ್ತಪ್ಪ, ಸಹ ಕಾರ್ಯದರ್ಶಿ ಶ್ರೀ ಬೊಳ್ಳಜಿರ ಬಿ. ಅಯ್ಯಪ್ಪ, ಅರಣ್ಯ ಇಲಾಖೆಯ ಅಧಿಕಾರಿ ಶ್ರೀ ಹನುಮಂತರಾಜ್, ಕೊಡಗು ವಿದ್ಯಾಲಯದ ಮ್ಯಾನೇಜರ್ ಆಗಿರುವ ಶ್ರೀ ರವಿ ಅನೇಕ ವಿದ್ಯಾರ್ಥಿಗಳು ಅರಣ್ಯ ಇಲಾಖೆಯ ಸಿಬ್ಬಂದಿಗಳು, ಕೊಡಗು ವಿದ್ಯಾಲಯದ ಶಿಕ್ಷಕ ವೃಂದದವರು ಸಿಬ್ಬಂದಿಗಳು ಹಾಜರಿದ್ದರು. ಕೊಡಗು ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಸುಮಿತ್ರರವರು ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕೊಡಗು ವಿದ್ಯಾಲಯದ ಶಿಕ್ಷಕಿ ಚಿತ್ರರವರು ಮಾಡಿದರೆ, ನಮ್ರತಾ ಅವರು ವಂದನಾರ್ಪಣೆ ಮಾಡಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಘಟಾಕರಾದ ಶ್ರೀಮತಿ ಯು.ಸಿ. ದಮಯಂತಿ ಪ್ರತಿಜ್ಞಾವಿಧಿ ಬೋಧಿಸಿದರು.

## ಕಾರವಾರ (ಉ.ಕ.)

ಜೂನ್ 19 ರಂದು ಮಾನ್ಯ ಶ್ರೀ ಪ್ರಭುಲಿಂಗ ಕವಳಿಕಟ್ಟಿ ಐ.ಎ.ಎಸ್ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಭಾರತ ಸ್ಕೌಟ್ಸ್-ಗೈಡ್ಸ್ ಕಾರವಾರ ಇವರೊಂದಿಗೆ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಜಿಲ್ಲಾ ಕಟ್ಟಡ ನಿರ್ಮಾಣದ ಬಗ್ಗೆ ಹಾಗೂ ಸ್ಥಳೀಯ ಸಂಸ್ಥೆ ವಾರ್ಷಿಕ ಮಹಾ ಸಭೆ ಕಾರ್ಯಕ್ರಮ ಕುರಿತಾಗಿ ಚರ್ಚಿಸಲಾಯಿತು. ಶ್ರೀಮತಿ ಲತಾ ಎಂ. ನಾಯಕ್, ಉಪನಿರ್ದೇಶಕರು ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ ಕಾರವಾರ ಇವರನ್ನು ಭೇಟಿ ಮಾಡಿ ಜಿಲ್ಲಾ ಸಂಸ್ಥೆ ಪರವಾಗಿ ಗೌರವ ಸನ್ಮಾನ ಮಾಡಿ ಮೂಲ ತರಬೇತಿ ಮುಂದುವರೆದ ತರಬೇತಿಗಳಿಗೆ ಹಾಗೂ ಕಾರ್ಯಕ್ರಮಗಳಿಗೆ ಶಿಕ್ಷಕರುಗಳನ್ನು ನಿಯೋಜನೆ ಮಾಡಿ ಕೊಡುವ ಬಗ್ಗೆ ಮನವಿ ಮಾಡಲಾಯಿತು. ನಂತರ ಆಯುಷ್ಯ ಇಲಾಖೆಗೆ ಭೇಟಿ ನೀಡಿ ಯೋಗ ದಿನಾಚರಣೆಗೆ ಎಲ್ಲಾ ರೀತಿಯ ಸಹಕಾರ ನೀಡಲು ಮನವಿ ಮಾಡಲಾಯಿತು.



* ವಿಶ್ವ ಯೋಗ ದಿನಾಚರಣೆ ಅಂಗವಾಗಿ ಯೋಗ ಸಪ್ತಾಹದ ಮೊದಲನೇ ದಿನ ಜೂನ್ 19 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ  ದೈಹಿಕ ಶಿಕ್ಷಕಿ ಕುಮಾರಿ ಶ್ವೇಜಾ ಮೊಗೇರ ಇವರ ಮಾರ್ಗದರ್ಶನದಲ್ಲಿ ಯೋಗ ತರಬೇತಿ ಕಾರ್ಯಕ್ರಮ ನಡೆಯಿತು.ಪ್ರಾಂಶುಪಾಲರಾದ ಶ್ರೀಮತಿ ಕಾಂತಿ ಭಟ್, ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ,ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಹಾಗೂ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



* ಕಾರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲೆಯ ಎಲ್ಲ ಇತರೆ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಒಂಬತ್ತನೇ ಅಂತರಾಷ್ಟ್ರೀಯ ಯೋಗ




ದಿನಾಚರಣೆಯನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಶ್ರೀ ಪ್ರಭುಲಿಂಗ ಕವಳಿಕಟ್ಟಿ, ಐ.ಎ.ಎಸ್., ಜಿಲ್ಲಾಧಿಕಾರಿಗಳು ವಹಿಸಿದ್ದರು. ಉದ್ಘಾಟಕರಾಗಿ ಮಾನ್ಯ ಶ್ರೀ ಈಶ್ವರ್ ಕಾಂದೋ, ಐ.ಎ.ಎಸ್., ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಕಾರವಾರ, ಮುಖ್ಯ ಅತಿಥಿಗಳಾಗಿ, ಮಾನ್ಯ ಶ್ರೀ ವಿಷ್ಣುವರ್ಧನ, ಐ.ಪಿ.ಎಸ್., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರವಾರ, ಮಾನ್ಯ ಶ್ರೀಮತಿ ಲಲಿತಾ ಶೆಟ್ಟಿ, ಜಿಲ್ಲಾ ಆಯುಷ್ ಅಧಿಕಾರಿ, ಮಾನ್ಯ ಶ್ರೀಮತಿ ಲತಾ ಎಂ. ನಾಯಕ, ಉಪ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕಾರವಾರ, ಇತರೆ ಎಲ್ಲಾ ಸಂಘ ಸಂಸ್ಥೆಗಳ ಅಧ್ಯಕ್ಷರು, ನಿರ್ದೇಶಕರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

* ಸ್ಥಳೀಯ ಸಂಸ್ಥೆ ಭಟ್ಕಳ ಇದರ ವತಿಯಿಂದ ಜೂನ್ 21 ರಂದು ವಿಶ್ವಯೋಗ ದಿನದ ಪ್ರಯುಕ್ತ ಶ್ರೀ ದುರ್ಗಾಪರಮೇಶ್ವರಿ ಪ್ರೌಢಶಾಲೆ ಅಳ್ವೆಕೋಡಿ ಸಣಭಾವಿ ತಾ. ಭಟ್ಕಳ. ಇಲ್ಲಿ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಭಟ್ಕಳ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ವೆಂಕಟೇಶ್ ಗುಬ್ಬಿ ಹಿತ್ತಲ ಯೋಗ ಕಾರ್ಯಕ್ರಮ ನಡೆಸಿಕೊಟ್ಟರು.

* ಜೂನ್ 21 ರಂದು ಶ್ರೀ ಚೆನ್ನಕೇಶವ, ಪ್ರೌಢಶಾಲೆ ಕರ್ಕಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ಭುವನ ಸುಂದರ, ಭೂಮಾಪನ ಅಧಿಕಾರಿಗಳು ಹೊನ್ನಾವರ ಇವರು ಮಾತನಾಡಿ "ಭಗವಂತ ನೀಡಿದ ಆಯುಷ್ಯದ ಅವಧಿಯನ್ನು ಬಳಸಿಕೊಳ್ಳುವಾಗ ಬುದ್ಧಿ ಮತ್ತು ಮನಸ್ಸನ್ನು ಕೇಂದ್ರೀಕರಿಸಬೇಕು ಅದಕ್ಕೆ ಇರುವ ಮಾರ್ಗ ಯೋಗ ಎಂದರು. ಜೀವನದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಂಡರೆ ಮಾತ್ರ ಉಜ್ವಲ ಭವಿಷ್ಯ ನಿಮ್ಮದಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷರು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಲ್.ಎಮ್. ಹೆಗಡೆಯವರು ಮಾತನಾಡಿ ಆಸನ, ಧ್ಯಾನ, ಪ್ರಾಣಾಯಾಮ ಇವುಗಳನ್ನು ಜೀವನದಲ್ಲಿ ಪ್ರತಿನಿತ್ಯ ಅಳವಡಿಸಿಕೊಂಡಾಗ ಮನಸ್ಸು ಸುದೃಢವಾಗುತ್ತದೆ, ಉತ್ತಮ ಆರೋಗ್ಯಕ್ಕಾಗಿ ಯೋಗ ಮಾಡಿ ಎಂದು ಹೇಳಿದರು. ಶ್ರೀ ಶ್ರೀಕಾಂತ ಹಿಟ್ನಳ್ಳಿ ಸ್ವಾಗತಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ವಿಶ್ವನಾಥ ನಾಯ್ಕರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಮಾರಿ ಕವಿತಾ ನಾಯ್ಕ ವಂದಿಸಿದರು. ಶ್ರೀಮತಿ ಮುಕ್ತಾ ನಾಯ್ಕ ನಿರೂಪಿಸಿದರು. ಶಾಲೆಯ ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಜೂನ್ 25 ರಂದು ಜಿಲ್ಲಾ ಸಂಸ್ಥೆ ಕಾರವಾರ ವತಿಯಿಂದ ವಾಯು (ಗಾಳಿ) ಕುರಿತು ಮೂರನೇ ವಾರದ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಆಯುಕ್ತರು ಗೈಡ್ ಜಿಲ್ಲಾ ಸಂಸ್ಥೆ ಕಾರವಾರ, ಇವರು ವಹಿಸಿ ಶಿಬಿರಾಗ್ನಿಯನ್ನು ಉದ್ಘಾಟಿಸಿದರು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಹಾಗೂ ನಂತರ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ವಾಯುವಿನ ಕುರಿತು ಹಾಡು, ಕವನ, ಭಾಷಣ ಹೇಳಿದರು ಮತ್ತು ಚಿತ್ರಕಲೆಯನ್ನು ಪ್ರದರ್ಶನ ಮಾಡಿದರು. ಈ ಸಂದರ್ಭದಲ್ಲಿ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಲೀಡರ್‌ಗಳು ಮತ್ತು ಸ್ಕೌಟರ್–ಗೈಡರ್‌ಗಳು ಭಾಗವಹಿಸಿದ್ದರು.

* ಜೂನ್ 29 ರಿಂದ ಜುಲೈ 01ರ ವರೆಗೆ ಜಿಲ್ಲಾ ಸಂಸ್ಥೆ ಕಾರವಾರ ಜಿಲ್ಲಾ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಶಿಬಿರವನ್ನು ಹೊನ್ನಾವರದ ಹಳದೀಪುರ ಅಗ್ರಹಾರ ಶ್ರೀ ಮಹಾಗಣಪತಿ ದೇವಸ್ಥಾನ ವೇದ ಪಾಠಶಾಲೆಗಳ ಆವರಣದಲ್ಲಿ ಶಿಬಿರವನ್ನು ಆಯೋಜಿಸಿದ್ದು ಈ ಶಿಬಿರದ ಅಧ್ಯಕ್ಷತೆಯನ್ನು ಡಾ. ಜಿ.ಜಿ ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಶಿಬಿರದ ಉದ್ಘಾಟಕರಾಗಿ ಶ್ರೀ ದಾಮೋದರ್ ನಾಯ್ಕ್, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರು ಆಗಮಿಸಿದ್ದರು ಹಾಗೂ ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಆಯುಕ್ತರು (ಗೈಡ್), ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ಆರ್. ಮಡಿವಾಳ್ ಶಿಬಿರದ ನಾಯಕರು, ಶ್ರೀಮತಿ ಬೇಬಿ ಪಡಿಯಾರ್, ಗೈಡ್ ವಿಭಾಗದ ನಾಯಕಿ ಭಾಗವಹಿಸಿದ್ದರು. ಶಿಬಿರದ ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಲಲಿತಾ ಹೆಗಡೆಜಿಲ್ಲಾ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸಿದ್ದು, ಡಾಕ್ಟರ್ ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಆಯುಕ್ತರು ಗೈಡ್, ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ಸೇರಿ ಡಾ. ಜಿ.ಜಿ. ಸಭಾಹಿತ್ ಅವರಿಗೆ ವೈದ್ಯರ ದಿನಾಚರಣೆ ಅಂಗವಾಗಿ ಪುಷ್ಪ ನೀಡುವದರ ಮುಖಾಂತರ ಅಭಿನಂದಿಸಿದರು.



* ಜುಲೈ 3 ರಂದು ಕಾರವಾರ ಜಿಲ್ಲಾ ಸಂಸ್ಥೆಯ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ನಾಲ್ಕನೆಯ ವಾರದಲ್ಲಿ ಸೂರ್ಯ–ಶಕ್ತಿಯ ಮೂಲ ಈ ಧ್ಯೇಯದ ಆನ್‌ಲೈನ್ ಕಾರ್ಯಕ್ರಮ ನಡೆಯಿತು. ಜಿಲ್ಲೆಯ ಐದು ತಾಲ್ಲೂಕುಗಳ ಕಬ್, ಬುಲ್–ಬುಲ್, ಸ್ಕೌಟ್–ಗೈಡ್, ರೋವರ್–ರೇಂಜರ್ಸ್ ಭಾಗವಹಿಸಿದ್ದರು. ಶ್ರೀ ಜಿ.ಆರ್. ಮಡಿವಾಳ, ಜಿಲ್ಲಾ ಖಜಾಂಚಿ, ಶ್ರೀ ರಾಜು ನಾಯಕ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸ್ಕೌಟ್

ಮಾಸ್ಟರ್ ಸೌರ ಶಕ್ತಿಯ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿ ಈ ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಕ್ಕಳಿಗೆ ಉತ್ತಮ ಸಾಧನೆ ಮಾಡಲು ಅನುಕೂಲ ಆಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಅಧ್ಯಕ್ಷೀಯ ಭಾಷಣದಲ್ಲಿ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಶೋಭಾ ಕುಲಕರ್ಣಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ವಿದ್ಯಾರ್ಥಿಗಳು ಪ್ರಕೃತಿ ಪ್ರೇಮ, ಪರಿಸರದ ಕಾಳಜಿ ಪರಿಸರ ಜಾಗೃತಿ ಮುಂತಾದ ವಿಷಯಗಳನ್ನು ಕಲಿತುಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪರಿಸರ ಸಂರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ಪಡೆದುಕೊಳ್ಳುವ ಮೂಲಕ ಪರಿಸರದ ಕುರಿತಾದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಅನುಕೂಲ ಆಗುತ್ತದೆ" ಎಂದು ಹೇಳಿದರು. ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಸ್ವಾಗತ ಮತ್ತು ವಂದನಾರ್ಪಣೆ ಮಾಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಶಿಕ್ಷಕರು, ಪಾಲಕರು ಭಾಗವಹಿಸಿದ್ದರು. ಶ್ರೀಮತಿ ವನಿತಾ ನಾಯ್ಕ ಕಾರ್ಯಕ್ರಮದ ನಿರೂಪಣೆ ನಡೆಸಿದರು.

* ಜುಲೈ 10 ರಂದು ಭಟ್ಕಳದಲ್ಲಿ ತಾಲ್ಲೂಕು ಮಟ್ಟದ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್-ರೇಂಜರ್ ದಳನಾಯಕ ನಾಯಕಿಯರ ಸಮಾವೇಶವನ್ನು ಸ್ಥಳೀಯ ಸಂಸ್ಥೆಯ ಕಾರ್ಯ ಅಧ್ಯಕ್ಷರಾದ ಮಾನ್ಯ ಶ್ರೀ ಎ.ಡಿ. ಮೊಗೇರ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಭಟ್ಕಳ ಇವರು ಸಸಿಗೆ ನೀರೆರೆಯುವ ಮುಖಾಂತರ ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಶ್ರೀ ದತ್ತಾತ್ರೆಯ ನಾಯಕ್, ದೈಹಿಕ ಶಿಕ್ಷಣ ಪರೀಕ್ಷಕರು ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು, ಶ್ರೀ ಬಿ.ಡಿ. ಫರ್ನಾಂಡಿಸ್, ಜಿಲ್ಲಾ ತರಬೇತಿ ಆಯುಕ್ತರು, ಶ್ರೀಮತಿ ಬೇಬಿ ಪಡಿಯರ್, ಜಿಲ್ಲಾ ತರಬೇತಿ ಆಯುಕ್ತರು, ಶ್ರೀ ಕರಿಸಿದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವೆಂಕಟೇಶ್ ಗುಬ್ಬಿಹಿತ್ತಲ್, ಶ್ರೀ ಮಂಜುನಾಥ ದೇವಾಡಿಗ, ಕೋಶಾಧಿಕಾರಿ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು 43 ಶಿಕ್ಷಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯಿಂದ ಕಳುಹಿಸಿದ 23-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನಾ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.






## ಕೊಪ್ಪಳ

ಭಗತ್ ಸಿಂಗ್ ಸ್ಕೌಟ್ಸ್ ಓಪನ್ ಯುನಿಟ್ ವತಿಯಿಂದ ಗವಿಶ್ರೀ ನಗರದ 1ನೇ ಕ್ರಾಸ್‌ನಲ್ಲಿರುವ ಗವಿಶ್ರೀ ಉದ್ಯಾನದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ಯ ಜೂನ್ 5 ರಂದು ಸಸಿ ನೆಡುವ ಕಾರ್ಯಕ್ರಮವನ್ನ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ನ್ಯಾಯಾಧೀಶರು, ಹಿರಿಯ ಸಿವಿಲ್ ನ್ಯಾಯಾಧೀಶರು, ಕೊಪ್ಪಳದ ಸಂಸದರು ಇನ್ನು ಮುಂತಾದ ಗಣ್ಯರು ಭಾಗವಹಿಸಿ ಯಶಸ್ವಿಗೊಳಿಸಿದರು.

ಕಾರ್ಯಕ್ರಮವನ್ನು ಕೊಪ್ಪಳ ಗವಿಮಠದ ಪೂಜ್ಯ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿಗಳು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗೌರವಾನ್ವಿತ ಜಿಲ್ಲಾ ಮುಖ್ಯ ನ್ಯಾಯಾಧೀಶರಾದ ಶ್ರೀ ಬನ್ನಿಕಟ್ಟಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ದೇವೇಂದ್ರ ಪಂಡಿತ್ ಮತ್ತು ಕೊಪ್ಪಳದ ಸಂಸದರಾದ ಶ್ರೀ ಸಂಗಣ್ಣ ಕರಡಿ, ನಗರ ಸಭಾ ಅಧ್ಯಕ್ಷರಾದ ಶ್ರೀ ಶಿವಗಂಗಾ ಶಿವರೆಡ್ಡಿ ಭೂಮಕ್ಕನವರ್, ಜಿಲ್ಲಾ ಕೌಶಲ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರಾಣೇಶ, ನಗರ ಸಭಾ ಸದಸ್ಯರಾದ ಶ್ರೀ ಮಲ್ಲಪ್ಪ ಕವಲೂರ, ಶ್ರೀ ಶಿವರೆಡ್ಡಿ ಭೂಮಕ್ಕನವರ್, ಜಿಲ್ಲಾ ನ್ಯಾಯಾಲಯದ ವ್ಯವಸ್ಥಾಪಕರಾದ ಶ್ರೀ ಬಸಪ್ಪ ಉಪಸ್ಥಿತರಿದ್ದರು.

ನಗರ ಸಭಾ ಅಧಿಕಾರಿಗಳು ಶ್ರೀ ಶಿವಶಾಂತ ವೀರ ಶಾಲೆ, ಸರಸ್ವತಿ ವಿದ್ಯಾ ಮಂದಿರ ಹಾಗೂ ಶಾಂತಿ ನಿಕೇತನ ಶಾಲೆಗಳಿಂದ 250ಕ್ಕೂ ಹೆಚ್ಚು ಸ್ಕೌಟ್ಸ್-ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಲೀಡರ್ ಟ್ರೈನರ್ ಶ್ರೀ ಜಯರಾಜ್ ಬೂಸದ್‌ರವರು ಕಾರ್ಯಕ್ರಮ ಆಯೋಜಿಸಿದ್ದರು.



## ರಾಯಚೂರು

ಜೂನ್ 17 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಗಾಳಿಯ ಕುರಿತು ಮೂರನೇ ವಾರದ ವರ್ಚುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು



ಆಯೋಜನೆ ಮಾಡಲಾಯಿತು. ಶಿಬಿರಾಗ್ನಿಯನ್ನು ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರುರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ, ರಾಯಚೂರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರುರವರು ಆಗಮಿಸಿದ್ದರು.

* ಜೂನ್ 17 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ದೇವದುರ್ಗ ಮತ್ತು G.M.H.P.S, ದೇವದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಮೂರನೇ ವಾರದ ಗಾಳಿಯ ಕುರಿತು ವರ್ಚುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಹಾಗೂ ಗೈಡ್ಸ್ ಮಕ್ಕಳು ಗಾಳಿಯ ಕುರಿತು ಭಾಷಣ, ಕವನ ಹೇಳಿದರು ಮತ್ತು ಚಿತ್ರಕಲೆಯನ್ನು ಪ್ರದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ವನಜಾ ತಿಳವಳ್ಳಿ, ಗೈಡ್ ಕ್ಯಾಪ್ಟನ್ ಹಾಗೂ ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಹಾಗೂ ಸಸಿಗಳಿಗೆ ನೀರು ಹಾಕಿ ಮೈದಾನವನ್ನು ಸ್ವಚ್ಛತೆ ಮಾಡಲಾಯಿತು.

* ಜೂನ್ 21 ರಂದು ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ರಾಯಚೂರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಆಯುಷ್ ಇಲಾಖೆ ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪೌರಾಡಳಿತ ಇಲಾಖೆ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ "9ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು ಈ ಸಮಾರಂಭದಲ್ಲಿ ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ನಗರದ ವಿವಿಧ ಶಾಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಾಗೂ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಮತ್ತು ಎಸ್.ಜಿ.ವಿ ರವರು ಭಾಗವಹಿಸಿದ್ದರು.

* ಜುಲೈ 01 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಸ್ಕೌಟ್ಸ್–ಗೈಡ್ಸ್ ಹಾಗೂ ರೋವರ್ಸ್–ರೇಂಜರ್ಸ್ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ಇವರು ಶಿಬಿರದ ಸ್ಥಳಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭಾ ಕೋರಿದರು. ಈ ಶಿಬಿರದ ರೇಂಜರ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ಆಲೀಯಾ ಖಾನುಂ, ಎ.ಎಲ್.ಟಿ.(ರೇ) ಜಿಲ್ಲಾ ಆಯುಕ್ತರು (ಗೈ), ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಮೊಹಿದ್ದೀನ್ ಶರೀಫ್ ಸಾಬ್, ಎ.ಎಲ್.ಟಿ (ಸ್ಕೌ), ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ರಜನಿ ಡಿ., Pre-ALT (G) ರಾಜ್ಯ ಪರಿಷತ್ ಸದಸ್ಯರು (ಗೈ), ರೋವರ್ ವಿಭಾಗದ ನಾಯಕರಾಗಿ ಶ್ರೀ ವೈ. ನರಸಿಂಹ, RSL ಕಾರ್ಯನಿರ್ವಹಿಸಿದರು. ಶಿಬಿರವನ್ನು ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ. ಇವರು ಸಂಘಟಿಸಿದರು. ಸ್ಕೌಟ್ಸ್, ಗೈಡ್ಸ್, ರೋವರ್ಸ್–ರೇಂಜರ್ಸ್ ಒಟ್ಟು 111 ಮಕ್ಕಳು ಭಾಗವಹಿಸಿದ್ದರು.




* ಜುಲೈ 02 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ವತಿಯಿಂದ ಶ್ರೀ ಶಾರದಾ ಆಂಗ್ಲ ಮಾಧ್ಯಮ ಶಾಲೆ, ಮಸ್ಕಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶ್ರೀ ಶರಣಬಸವ ಮೇಟಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಮಸ್ಕಿ / ಲಿಂಗಸುಗೂರು, ಶ್ರೀ ಮಲ್ಲಿಕಾರ್ಜುನ ಇತ್ಲಿ, ಅಧ್ಯಕ್ಷರು ಮಸ್ಕಿ, ಶ್ರೀ ಮಹಾಂತೇಶ ಮಸ್ಕಿ, ಜಿಲ್ಲಾ ಸಹಾಯಕ ಆಯುಕ್ತರು (ಸ್ಕೌ) ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಶಿಬಿರದ ಸ್ಥಳಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭಾಕೋರಿದರು. ಈ ಶಿಬಿರದ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಶಶಿಕಾಂತ್ ದೇಸಾಯಿ, ALT(S), ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಮುತ್ತಕ್ಕ, ALT (G) ಹಾಗೂ ಸಹನಾಯಕರಾಗಿ ಶ್ರೀ ತಿಪ್ಪಣ್ಣ ರಾಥೋಡ್, HWB(S), ಶ್ರೀಮತಿ ವಾಸಂತಿ, HWB(G) ಕಾರ್ಯವನ್ನು ನಿರ್ವಹಿಸಿದ್ದಾರೆ. ಶ್ರೀ ಶಿವಪ್ಪ ಹಸಮಕಲ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಮಸ್ಕಿ ಇವರು ಸಂಘಟಿಸಿದರು.

* ಜುಲೈ 03 ರಂದು ಮಾನ್ಯ ಶ್ರೀ ಎಲ್. ಚಂದ್ರಶೇಖರ್ ನಾಯಕ, ಭಾ.ಆ.ಸೇ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪೋಷಕರು ಜಿಲ್ಲಾ ಸಂಸ್ಥೆ ರಾಯಚೂರು ಇವರು ಭಾರತ್ ಸ್ಕೌಟ್ಸ್ & ಗೈಡ್ಸ್ ಕರ್ನಾಟಕ 2023–24ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳು ಯೋಜನಾ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ.ರವರು ಉಪಸ್ಥಿತರಿದ್ದರು.



* ಜುಲೈ 03 ರಂದು ಮಾನ್ಯ ಶ್ರೀ ನಿಖಿಲ್ ಬಿ., ಐ.ಪಿ.ಎಸ್. ಜಿಲ್ಲಾ ಅಧೀಕ್ಷಕರು, ರಾಯಚೂರು ಇವರಿಗೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ ಕಳಿಸಿದ, 2023–24ನೇ ಸಾಲಿನ



ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ನೀಡಲಾಯಿತು.

* ಜುಲೈ 04 ರಂದು ಮಾನ್ಯ ಶ್ರೀ ರಾಜಶೇಖರ ಪಟ್ಟಣ ಶೆಟ್ಟಿ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆ ರಾಯಚೂರು ಇವರಿಗೆ ರಾಜ್ಯ ಸಂಸ್ಥೆಯ 2023-24ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನಾ ಪುಸ್ತಕವನ್ನು ರಾಜ್ಯ ಸಂಸ್ಥೆ ಹಾಗೂ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ನೀಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಆರ್. ಸುಧಾ, ಜಿಲ್ಲಾ ಸ್ಥಾನೀಕ ಆಯುಕ್ತರು (ಗೈ), ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ/ ಎಸ್.ಎಮ್.ಸಿ. ರವರು ಉಪಸ್ಥಿತರಿದ್ದರು.




* ಜುಲೈ 06 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಡಾ॥ ವಿ.ಎಸ್. ಆಚಾರ್ಯ, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಅವರ 84ನೇ ಜನ್ಮ ದಿನಾಚರಣೆಯ ಅಂಗವಾಗಿ ವನ ಮಹೋತ್ಸವ ಕಾರ್ಯಕ್ರಮ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ ಮತ್ತು ಕಲಬುರ್ಗಿ ವಿಭಾಗ ಮಟ್ಟದ ಖಖಐ/ ಖಐ/ಉಪನ್ಯಾಸಕರಿಗೆ ಒಂದು ದಿನದ ಮಾಹಿತಿ ಕಾರ್ಯಾಗಾರದ ಪೂರ್ವಭಾವಿ ಸಭೆಯನ್ನು ಶ್ರೀ ಬಸವರಾಜ ಬೋರೆಡ್ಡಿ ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಪ್ರಾಸ್ತಾವಿಕವಾಗಿ ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಶ್ರೀ ಜಯ ಪ್ರಕಾಶ್ ರೆಡ್ಡಿ, ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ರಾಯಚೂರು/ಅಜೀವ ಸದಸ್ಯರು, ಶ್ರೀಮತಿ ದಾನಮ್ಮ ಜಿಲ್ಲಾ ಖಜಾಂಚಿಗಳು. ಕಾರ್ಯಾಲಯದ ಆವರಣದಲ್ಲಿ ಸಸಿಗಳನ್ನು ನೆಡಲಾಯಿತು.

* ಜುಲೈ 06 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಮಾನ್ಯ ಶ್ರೀ ಸೋಮಶೇಖರಪ್ಪ ಹೋಕ್ರಾಣಿ, ಪ್ರಭಾರಿ ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಯಚೂರು ಅವರಿಗೆ ರಾಜ್ಯ ಸಂಸ್ಥೆಯಿಂದ ನೀಡಿದ 2023-24ನೇ ಸಾಲಿನ ವಾರ್ಷಿಕ ಯೋಜನಾ ಪುಸ್ತಕವನ್ನು ವಿತರಿಸಿ ಸ್ಕಾರ್ಫ್ ಓಗಲ್ ಹಾಕಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ, ಪ್ರಭಾರಿ ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಸವರಾಜ, ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ದಾನಮ್ಮ, ಜಿಲ್ಲಾ ಖಜಾಂಚಿಗಳು ಇವರು ಉಪಸ್ಥಿತರಿದ್ದರು.



## ರಾಮನಗರ

ಕನಕಪುರ ಮತ್ತು ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಜೂನ್ 24 ರಂದು ಸಾಯಂಕಾಲ ಜೂಮ್ ಮೂಲಕ ಆನ್‌ಲೈನ್ ವರ್ಚ್ಯುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಗಾಳಿ (ವಾಯು) ವಿಷಯ ಕುರಿತು ಹಮ್ಮಿಕೊಂಡಿದ್ದು ಕಬ್ ಮತ್ತು ಬುಲ್‌ಬುಲ್, ರೋವರ್ ಮತ್ತು ರೇಂಜರ್ ಹಾಗೂ ಎಲ್ಲಾ ವಿಭಾಗ ದಳ ನಾಯಕರುಗಳು ಭಾಗವಹಿಸಿದ್ದರು. ಮುಖ್ಯ ಅತಿಥಿಗಳು ಪ್ರಾದೇಶಿಕ ಅರಣ್ಯ ಇಲಾಖೆಯ ರಾಮನಗರ ಅಧಿಕಾರಿಗಳು ಶ್ರೀ ವಾಜುರವರು ಆಗಮನಿಸಿ "ವಿದ್ಯಾರ್ಥಿಗಳಿಗೆ ಗಾಳಿ ಪ್ರತಿಯೊಂದು ಜೀವ ಸಂಕುಲದ ಅಗತ್ಯವಿರುವ ಸಂಪನ್ಮೂಲ ಅದನ್ನು ಉಳಿಸಿ ನಿಟ್ಟಿನಲ್ಲಿ ಮಾನವ ಗಿಡ ನೆಟ್ಟು ಬೆಳೆಸೇಕು ಹಾಗೂ ಪ್ರತಿ ಹತ್ತು ಜನರಲ್ಲಿ ಒಬ್ಬ ವಿಷ ಗಾಳಿ ಸೇವನೆಯಿಂದ ಮಣ ಹೊಂದಿದ್ದಾರೆ ಎಂದು ಅಂದಾಜಿಸಲಾಗಿದೆ" ಎಂದು ತಿಳಿಸಿದರು. ನಂತರ ವಿದ್ಯಾರ್ಥಿಗಳು ಗಾಳಿ ಕುರಿತು ಹಾಡುಗಳು ಮತ್ತು ಕಥೆ ಹೇಳುವ ಮೂಲಕ ಮತ್ತು ವಾಯು ಮಾಲಿನ್ಯಕ್ಕೆ ಸಂಬಂಧಿಸಿದಂತೆ ಚಿತ್ರ ಬರೆದ ಅದನ್ನು ಉದ್ದೇಶಿಸಿ ಮಾತನಾಡಿ ವಿದ್ಯಾರ್ಥಿಗಳು ಗಾಳಿ ಮಹತ್ವ ಮತ್ತು ಉಪಯೋಗ ಕುರಿತು ಮಾಹಿತಿ ನೀಡಿದರು. ನಂತರ ಎ.ಎಸ್.ಜಿ.ವಿ. ಶ್ರೀಮನು ಗಾಳಿ ಕುರಿತು ಒಂದು ಪಿ.ಪಿ.ಟಿ. ತೋರಿಸುವ ಮೂಲಕ ಮಾಹಿತಿ ನೀಡಿದರು. ಈ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲು ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಶಿವನಂಜಪ್ಪ, ಶ್ರೀ ಗೋಪಾಲ್ ವೈ. ಕಾಂಬಳೆ, ಶ್ರೀ ಕೃಷ್ಣಪ್ಪ ಎಸ್., ಜಿಲ್ಲಾ ಪದಾಧಿಕಾರಿಗಳು ಶಾಲೆ ಮತ್ತು ಕಾಲೇಜು ಮುಖ್ಯ ಶಿಕ್ಷಕರು ಮತ್ತು ಪ್ರಾಂಶುಪಾಲರು ಹಾಗೂ ಎಲ್ಲಾ ದಳದ ನಾಯಕರು ಸಹಕಾರ ನೀಡಿದರು.

* ಮಾಗಡಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಶ್ರೀ ಉಮೇಶ್, ರೇಂಜರ್ ಲೀಡರ್ ಶ್ರೀಮತಿ ಚಂದ್ರಪ್ರಭ ಹಾಗೂ ಕಾಲೇಜು ಪ್ರಾಂಶುಪಾಲ ಸಹಕಾರದಿಂದ "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಬೀಜದುಂಡೆಗಳು ತಯಾರಿಸುವ ಕಾರ್ಯಕ್ರಮವನ್ನು "ಕಮಿಕವನ ಎಸ್ಟೇಟ್" ಒಪ್ಪೋಜಿಟ್ ಭವತಾರಿಣಿ ಆಶ್ರಮ ಪೋಲೋಹಳ್ಳಿ ಮಾಗಡಿ ತಾಲ್ಲೂಕಿನಲ್ಲಿ (Kamykavana Estate Opposite to Bhavatharini Ashram Polohall Magadi Thalu) ಹಮ್ಮಿಕೊಳ್ಳಲಾಗಿತ್ತು. ಈ ಸಮಯದಲ್ಲಿ ಸ್ಥಳೀಯ ಪರಿಸರ ಪ್ರೇಮಿಗಳು ಹಾಗೂ ರೋವರ್ ಮತ್ತು ರೇಂಜರ್‌ಗಳು ವಿವಿಧ ಜಾತಿಯ ಔಷಧೀಯ ಸಸಿಗಳ ಹಾಗೂ ಹೂ, ಹಣ್ಣು ಮತ್ತು ಇತರ ಕಾಡು ಜಾತಿಯ ಮರಗಳ ಬೀಜಗಳನ್ನು ಬಳಸಿಕೊಂಡು ಸುಮಾರು 25 ಸಾವಿರ ಬೀಜದುಂಡೆಗಳನ್ನು ತಯಾರಿಸಿದರು.




## ಶಿವಮೊಗ್ಗ

2023–2024ನೆ ಸಾಲಿನ ಮಾಹಿತಿ ಜ್ಞಾನ ಇತ್ಯಾದಿ ವಿಷಯಗಳನ್ನು ಒಳಗೊಂಡ ಮಾಹಿತಿ ಕೈಪಿಡಿಯನ್ನು ಶಿವಮೊಗ್ಗ ಜಿಲ್ಲಾಧಿಕಾರಿ ಹಾಗೂ ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಅಧ್ಯಕ್ಷರು ಆದ ಮಾನ್ಯ ಡಾ॥ ಆರ್. ಸೇಲ್ವಮಣಿ, ಭಾ.ಆ.ಸೇ.ರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತ ಶ್ರೀ ಕೆ.ಪಿ. ಬಿಂದುಕುಮಾರ, ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್, ಜಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀಮತಿ ಭಾರತಿ ಡಾಯಸ, ಡಿ.ಟಿ.ಸಿ.ಗಳಾದ ಶ್ರೀ ಎಂ. ಗಣಪತಿ, ಶ್ರೀಮತಿ ಸಿ.ಎಸ್. ಕಾತ್ಯಾಯಿನಿ, ಎಲ್.ಎ. ಕಾರ್ಯದರ್ಶಿಗಳಾದ ಶ್ರೀ ಎ.ಎಸ್. ಮಂಜುನಾಥ ಶ್ರೀ ಎ.ವಿ. ರಾಜೇಶ ಹಾಗೂ ಶ್ರೀ ಪ್ರಥ್ವಿರಾಜ ಗಿರಿಮಾಜಿರವರು ಉಪಸ್ಥಿತರಿದ್ದರು.



## ವಿಜಯಪುರ

ಜೂನ್ 21 ರಂದು ವಾಸಂತಿಬಾಯಿ ಜಿಗಜಿನಿ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ ತಾಲ್ಲೂಕು, ವಿಜಯಪುರ ಇಲ್ಲಿ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. ಯೋಗ ಶಿಕ್ಷಕಿ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಕೆ. ಸುನಂದಾರವರು ಯೋಗ ತರಬೇತಿ ನೀಡಿದರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀ, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಎಸ್.ಎಲ್. ಇಂಗಳೇಶ್ವರ, ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಜಿಲ್ಲಾ ತರಬೇತಿ ಆಯುಕ್ತರು (ಗೈ) ಶ್ರೀಮತಿ. ಪಾರ್ವತಿ ಎಂ. ಪೂಜಾರಿ ಮುಂತಾದವರು ಉಪಸ್ಥಿತರಿದ್ದರು. ಒಟ್ಟು 250 ಸ್ಕೌಟ್ಸ್ ಗೈಡ್ಸ್ ಮಕ್ಕಳು ಹಾಗೂ ದಳನಾಯಕರು ಭಾವವಹಿಸಿದರು. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಬಾಲಕಿಯರ ವಸತಿ ಶಾಲೆ, ಅರಕೇರಿ ಶಾಲೆಯ ಮಕ್ಕಳು ಯೋಗ ಸಾಹಸ ಪ್ರದರ್ಶನ ಮಾಡಿದರು.



* 2022–23ನೇ ಸಾಲಿನ ಸ್ಕೌಟ್ಸ್ ಮತ್ತು ಗೈಡ್ಸ್ ತೃತೀಯ ಸೋಪಾನ ಪರೀಕ್ಷಾ ಶಿಬಿರ ಹಾಗೂ ರಾಜ್ಯ ಪುರಸ್ಕಾರ ಪೂರ್ವಸಿದ್ದತಾ ತರಬೇತಿ ಶಿಬಿರವನ್ನು ಜೂನ್ 19 ರಿಂದ 21ರ ವರೆಗೆ ವಾಸಂತಿಬಾಯಿ ಜಿಗಜಿನಿ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ ತಾ.ವಿಜಯಪುರ ಇಲ್ಲಿ ಸಂಘಟಿಸಲಾಗಿತ್ತು. ಶಿಬಿರವನ್ನು ಜೂನ್ 19 ರಂದು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀ, ಮಕ್ಕಳಿಗೆ ಸ್ಕಾರ್ಫ್ ಧಾರಣೆ ಮಾಡುವುದರ ಮೂಲಕ ಉದ್ಘಾಟಿಸಿದರು. ಶಿಬಿರದಲ್ಲಿ ಭಾಗವಹಿಸಿದ ಎಲ್ಲರೂ ಸ್ಕೌಟ್-ಗೈಡ್ ಮೌಲ್ಯಗಳನ್ನು ಸಮಾಜದ ಸರ್ವರಿರೂ ಪರಿಚಯಿಸಬೇಕು. ಉತ್ತಮ ಪ್ರಜೆಗಳಾಗಬೇಕು ಎಂದು ಮಕ್ಕಳಿಗೆ ಕರೆ ನೀಡಿದರು. ಸ್ಕೌಟ್ ವಿಭಾಗದ ಶಿಬಿರದ ನಾಯಕರಾಗಿ ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಹಾಗೂ ಗೈಡ್ ವಿಭಾಗದ ಶಿಬಿರದ ನಾಯಕಿಯಾಗಿ ಶ್ರೀಮತಿ ಪಾರ್ವತಿ ಎಂ. ಪೂಜಾರಿರವರು ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್, ಚಡಚಣ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಸಿ. ಉಮರಾಣಿ, ಎಸ್.ಜಿ.ವಿ. ರಾಜಶೇಖರ ಖೇಡಗಿ, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಶ್ರೀಶೈಲ ಸೊಲಾಪೂರ, ಸ್ಕೌಟ್ ಮಾಸ್ಟರ್ಸ್ ಶ್ರೀ ಎ.ಕೆ. ಮುಲ್ಲಾ, ಶ್ರೀ ಪ್ರಕಾಶ ಹದ್ಲಿ, ಶ್ರೀ ವಿ.ಪಿ. ಅವತಾಡೆ ಮುಂತಾದವರು ಉಪಸ್ಥಿತರಿದ್ದರು.

## ವಿಜಯನಗರ

ವಿಶ್ವವಿಖ್ಯಾತ ಹಂಪಿಯಲ್ಲಿ ನಡೆಯುವ ಜಿ–20 ಶೃಂಗಸಭೆಯ ಪೂರ್ವ ಸಿದ್ಧತಾ ಅಂಗವಾಗಿ ಜುಲೈ 07 ರಂದು ಮಾನ್ಯ ಸಹಾಯಕ ಆಯುಕ್ತರು ಹೊಸಪೇಟೆ ಇವರ ನೇತೃತ್ವದಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹೊಸಪೇಟೆ ಇವರ ಸಹಕಾರದಿಂದ ಸ್ಥಳೀಯ ಸಂಸ್ಥೆ ಹೊಸಪೇಟೆಯ 200 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, 15 ಜನ ಶಿಕ್ಷಕರು ಸೇರಿ, ಪ್ರಾಚ್ಯ ವಸ್ತು ಇಲಾಖೆಯ ಅಧಿಕಾರಿಗಳಾದ ಶ್ರೀ ಅನಿರುದ್, ಶ್ರೀ ರವೀಂದ್ರ ಮತ್ತು ಶ್ರೀ ಕಿರಣ್ ಇವರ ಮಾರ್ಗದರ್ಶನದಲ್ಲಿ ಶ್ರೀವಿರೂಪಾಕ್ಷ ದೇವಾಲಯದ ಮುಂದಿನ ರಥಬೀದಿ, ಕೃಷ್ಣ ಬಜಾರ್, ಸಾಸವೆ ಕಾಳು ಗಣಪ, ಕಡಲೆಕಾಳು ಗಣಪ, ಪುಷ್ಕರಣಿ, ವಿಜಯವಿಠಲ ದೇವಸ್ಥಾನದ ಆವರಣ, ಕಮಲ ಮಹಲ್, ಗಜಶಾಲೆ ಸ್ಥಳಗಳನ್ನು ಪ್ಲಾಸ್ಟಿಕ್ ಮುಕ್ತ ವಲಯಗಳನ್ನಾಗಿ ಮಾಡಲು ಶ್ರಮದಾನ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಹನುಮನಾಯಕ್ ಹಾಗೂ ಶಿಕ್ಷಣ ಸಂಯೋಜಕರಾದ ಶ್ರೀ ಮಲ್ಲೇಶಪ್ಪ, ಸ್ಕೌಟ್ ಗೈಡ್ ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ರೇಣುಕಾ, ಸ್ಥಳೀಯ ಕಾರ್ಯದರ್ಶಿ ಶ್ರೀ ತಿಪ್ಪೇಸ್ವಾಮಿ, ಖಜಾಂಚಿ ಶ್ರೀ ಕೆ. ತಿಪ್ಪೇಸ್ವಾಮಿ ಮತ್ತು ಎಸ್.ಜಿ.ವಿ.ಯಾದ ಶ್ರೀ ಸಾಂಗ್ಲಿಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಯಾದಗಿರಿ

ಜುಲೈ 06 ರಂದು ಕರ್ನಾಟಕ ಸರಕಾರದ ಮಾಜಿ ಗೃಹ ಸಚಿವರು, ಉನ್ನತ ಶಿಕ್ಷಣ ಸಚಿವರಾದ ದಿ. ಡಾ॥ ವಿ.ಎಸ್. ಆಚಾರ್ಯರವರ 84ನೇ ಹುಟ್ಟುಹಬ್ಬವನ್ನು ರಾಜೇಶ್ವರಿ ಹಿರಿಯ ಪ್ರಾಥಮಿಕ ಶಾಲೆ ಯಾದಗಿರಿಯಲ್ಲಿ ಸಸಿಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀ ಬಸವರಾಜ ಅಲೆಮನೆ, ಸ್ಕೌಟ್ ಮಾಸ್ಟರ್ ಶ್ರೀ ಗಾಲೆಪ್ಪ, ಸ್ಕೌಟ್–ಗೈಡ್ ಸಹಾಯಕರಾದ ಶ್ರೀ ಮಹಮ್ಮದ್ ಶಪುದ್ದೀನ್ ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



* ಜುಲೈ 05 ರಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಭಾಶ್ಚಂದ್ರ ಕೌಲಗಿರವರಿಗೆ ಹಾಗೂ ಕಾಲೇಜಿನ–ರೋವರ್ ಸ್ಕೌಟ್ ಲೀಡರ್, ರೇಂಜರ್ ಲೀಡರ್‌ರವರಿಗೆ ರಾಜ್ಯ ಸಂಸ್ಥೆ ವತಿಯಿಂದ ನೀಡಿರುವ 2023–24ನೇ ಸಾಲಿನ ಯೋಜನಾ ಪುಸ್ತಕವನ್ನು ನೀಡಿ ಚಾಮರಾಜನಗರ ಜಿಲ್ಲೆಯಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಶಿಬಿರಕ್ಕೆ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳನ್ನು ನಿಯೋಜಿಸಲು ಮನವಿ ಮಾಡಲಾಯಿತು.



* ಜುಲೈ 05 ರಂದು ಯಾದಗಿರಿ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಮರಿಸ್ವಾಮಿರವರಿಗೆ ರಾಜ್ಯ ಸಂಸ್ಥೆ ವತಿಯಿಂದ ನೀಡಿರುವ 2023–24ನೇ ಸಾಲಿನ ಯೋಜನಾ ಪುಸ್ತಕವನ್ನು ನೀಡಲಾಯಿತು.

### ಒಂದಾಗಿ ಚಂದಾಗಿ ಬದುಕೋಣ

ಈ ಜಗದಲ್ಲಿ ನೋಡ ಭೇದ ಭಾವ
ಧರ್ಮದಲ್ಲೂ ನೋಡಿದರೆ ಭೇದ ಭಾವ
ಈ ಮಾನವನಲ್ಲಿ ಎಂತ ಭೇದ ಭಾವ ॥ ಪಲ್ಲವಿ ॥

ಎಲ್ಲಾ ಧರ್ಮದಲ್ಲೂ ಹೇಳುವುದು ಒಂದೇ
ನಾವೆಲ್ಲರೂ ಸಮಾನರು
ಧರ್ಮದ ಪ್ರಕಾರ ದೇವರು ಬೇರೆ ಬೇರೆ
ನಾವು ಪೂಜಿಸುವುದು ಪರಮಾತ್ಮನೊಬ್ಬನೇ ॥ ೧ ॥

ಮಾನವನ ಪ್ರಕಾರ ಜಾತಿ ಬೇರೆ ಬೇರೆ
ಆದರೆ, ದೇವರ ಪ್ರಕಾರ ಜಾತಿ ಬೇರೊಂದಿಲ್ಲ
ಜಾತಿ ಇರುವುದು ಎರಡೆ ಜಾತಿ
ಅದುವೆ ಹೆಣ್ಣು ಗಂಡೆಂಬೆರಡು ಜಾತಿ ॥ ೨ ॥

ಹೆಣ್ಣು–ಗಂಡು ಎಂಬುವುದು
ಸೃಷ್ಟಿಯ ಎರಡು ಕಣ್ಣು ತಾನೇ?
ಅದನ್ನು ನಾವೆಲ್ಲರೂ ನಂಬಲೇಬೇಕು?
ಇದನ್ನು ನಂಬಲಾರದವರೆ ಮೂರ್ಖರು ॥ ೩ ॥

ತಿಳಿದವರು ಜನರಿಗೆ ಒಳ್ಳೆಯದು ಹೇಳಬೇಕು
ಎಲ್ಲಾ ಜಾತಿ ಒಂದೇ ಎಂದು
ತಿಳಿದು ತಿಳಿದು ಭೇದ ಭಾವ ಮಾಡುತ್ತಾರಲ್ಲ ಇದಕ್ಕೆನೆನ್ನ ಬೇಕು?
ಇದರಿಂದ ಮುಕ್ತಿಯಾಗ ಬೇಕಲ್ಲವೇ? ॥ ೪ ॥

ನಾವೆಲ್ಲ ಒಂದಾಗಬೇಕಲ್ಲವೇ?
ಮಾನವ ಕುಲಂ ಒಂದೇ ಎಂದು ಸಾರಬೇಕಲ್ಲವೇ?
ಬನ್ನಿ ಬನ್ನಿ ತಿಳಿದವರೆಲ್ಲ ಒಂದಾಗಿ ತಿಳಿಸೋಣ
ಚಂದಾಗಿ ಬದುಕೋಣ ॥ ೫ ॥

– ಸೃಷ್ಟಿ ಪವಾಡೆಪ್ಪ ಕುಂಬಾರ

೯ನೇ ತರಗತಿ, ಡಾ॥ ಸುಧಾಮೂರ್ತಿ ಗೈಡ್ಸ್ ಕಂಪನಿ, ಶ್ರೀಮತಿ ಬಿ.ಹೆಚ್. ಜಕ್ಕನಗೌಡರ ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

WITH BEST COMPLIMENTS

# NEW PRESIDENCY HIGH SCHOOL




## Vishwanath
**Secretary**



**#7, T.D. Lane, Cottonpet**
**Bengaluru - 560 053**

**Ph.: 080 26701432**
**Mob.: 94480 41432**

WITH BEST COMPLIMENTS

# ST. CATHERINE HIGH SCHOOL

## Srinivasulu .M, Secretary




**No. E-207,**
**Binny Mill Road,**
**Cottonpet,**
**Bengaluru - 560 053**

**Mob.: 77605 98595**

# ಬಂಧನ ಬದುಕಿನಲ್ಲಿರುವವರೊಂದಿಗೆ ಯೋಗ

## (ನನ್ನ ಅನುಭವ)

**ಶ್ರೀಮತಿ ಅಲಿಮ ಪಿ.ಹೆಚ್.,** ಎ.ಎಲ್.ಟಿ.(ಜಿ), ಕೊಡಗು ಜಿಲ್ಲೆ

ಮಡಿಕೇರಿ ಕಾರಾಗೃಹದಲ್ಲಿರುವ ಬಂಧಿ ನಿವಾಸಿಗಳ ಮನಪರಿವರ್ತನೆಗೆ ಮುನ್ನುಡಿ ಬರೆದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಡಗು ಜಿಲ್ಲಾ ಸಂಸ್ಥೆ ಮತ್ತು ಸಾರ್ವಜನಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಪ್ರಜಾಪ್ರಿತ ಬ್ರಹ್ಮಕುಮಾರಿ ಈಶ್ವರೀ ವಿಶ್ವವಿದ್ಯಾಲಯ "ವಸುದೈವ ಕುಟುಂಬಕ್ಕಾಗಿ ಯೋಗ" ಎಂಬ ಧ್ಯೇಯ ವಾಕ್ಯದ 9ನೇ ಅಂತರಾಷ್ಟ್ರೀಯ ಯೋಗ ದಿನವನ್ನು ಯೋಗ ಸಪ್ತಾಹವಾಗಿ ವಾಸುದೇವರ ಜನ್ಮಸ್ಥಳವಾದ ಕಾರಾಗೃಹದಲ್ಲಿ ಆಚರಿಸಿದ್ದು ವಿಶೇಷವಾಗಿತ್ತು.

ಅಪರಾಧಿಗಳನ್ನು ಅಥವಾ ಕಾನೂನುಬದ್ಧ ಪ್ರಾಧಿಕಾರ ಒಪ್ಪಿಸಿಕೊಟ್ಟವರನ್ನು ಭದ್ರ ಸುರ್ಪದಿನಲ್ಲಿ ಅಥವಾ ಬಂಧನದಲ್ಲಿ ಇಡಲು ಬಳಸಲಾಗುವ ಕಟ್ಟಡವೇ ಕಾರಾಗೃಹ. ಕಾರಾಗೃಹವನ್ನು ವಿಚಾರಣೆಯ ಮೊದಲು ಮತ್ತು ಶಿಕ್ಷೆಯನ್ನು ವಿಧಿಸುವರೆಗೆ ಆಪಾದಿತನನ್ನು ಕಾವಲಿನಲ್ಲಿಡಲು ಉಪಯೋಗಿಸಲಾಗುತ್ತದೆ.

ಕಳ್ಳರು, ಶುಡುಕರು, ಕೊಲೆಗಡುಕರು, ವ್ಯಭಿಚಾರಿಗಳು, ಬಾಲದೋಷಿಗಳು, ಅಪರಾಧಿಗಳೆನಿಸಿದ ನಿರ್ದೋಷಿಗಳು, ಅಪರಾಧ ಮಾಡುವುದನ್ನೇ ವೃತ್ತಿಯನ್ನಾಗಿಸಿಕೊಂಡವರು. ಹೀಗೆ ಆಪಾದಿತರಲ್ಲಿ ನಾನಾ ಬಗೆಗಳುಂಟು. ಆದರೇ ಅನೇಕ ಅಪರಾಧಗಳಿಗೆ ಮೂಲಕಾರಣ ಮನೆಯ ವಾತಾವರಣ ಮತ್ತು ಪರಿಸರ. ಮನೆಯಲ್ಲಿ ಸಿಗಬೇಕಾದ ಸೌಹರ್ದತೆಯ ವಾತಾವರಣ, ಪ್ರೀತಿ, ನಂಬಿಕೆ, ಕ್ಷಮೆ ದೊರೆಯದಿದ್ದಾಗ, ಸಮಾಜದ ತಿರಸ್ಕಾರಕ್ಕೆ ಒಳಗಾದಾಗ ವ್ಯಕ್ತಿಗಳು ಅಪರಾಧಿಗಳಾಗುತ್ತಾರೆ. ಬಡತನ, ನಿರುದ್ಯೋಗ, ಅನಕ್ಷರತೆ, ಅತಿ ವ್ಯಾಮೋಹ ಇವುಗಳು ಅಪರಾಧ ಮಾಡಲು ಪ್ರೇರೇಪಿಸುವ ಇತರ ಕಾರಣಗಳು. ಮೊದಲ ದಿನ ನಡುಗುವ ಕಾಲು, ಕಂಪಿಸುವ ಧ್ವನಿ ಚೋರಾದ ಎದೆ ಬಡಿತದೊಂದಿಗೆ ಯೋಗ ತರಗತಿ ಪ್ರಾರಂಭ ಮಾಡಿದಾಗ ಬಂಧೀನಿವಾಸಿ ಯಾರೊಬ್ಬರ ಮುಖದಲ್ಲಿಯೂ ಸೌಜನ್ಯದ ಮುಗುಳು ನಗು ಕೂಡ ಕಾಣಲಿಲ್ಲ. ಅವರಲ್ಲಿ ನಿರುತ್ಸಾಹ, ಆತಂಕ, ಒತ್ತಡ, ಖಿನ್ನತೆ, ಮುಂಗೋಪ ಕಂಡಿತು. ಹಲವು ಬಾರಿ ಕೋರಿಕೊಂಡಾಗ ನಿರಾಸಕ್ತಿಯಿಂದ ಬಲವಂತಕ್ಕಾಗಿ ಅರೆಮನಸ್ಸಿನಿಂದ ಬಂದು ಕುಳಿತುಕೊಂಡವರೇ ಹೆಚ್ಚು. ಆಸಕ್ತಿ ಇದ್ದವರು ಬೆರಳೆಣಿಕೆಯಷ್ಟು.

ಸುಮಾರು 188 ಬಂಧಿ ನಿವಾಸಿಗಳಿದ್ದರು. ಕೆಲವರು ಹೆಂಗಸರು, ಜೊತೆಗೆ ಒಬ್ಬರು ಹೆಂಗಸಿನೊಂದಿಗೆ ಒಂದು ವರ್ಷದ ಪುಟ್ಟ ಕಂದಮ್ಮನನ್ನು ಕಂಡಾಗ ಅಲ್ಲಿಂದ ಬೇಗ ಹೊರಗೆ ಹೋದರೆ ಸಾಕೆಂಬ ಭಾವ. ಕೈದಿಗಳು ಎಂದಾಗ, ನಮ್ಮ ಮನಸ್ಸಿಗೆ ಬರುವ ಚಿತ್ರ ಕ್ರೂರಿಗಳು. ಆಕ್ರಮಣಕಾರರು, ಮಾನಸಿಕ ಸ್ಥಿಮಿತ ಇಲ್ಲದವರು. ಬೇಗ ಭಾವೋದ್ರೇಕಕ್ಕೆ ಒಳಗಾಗುವವರು ಇತ್ಯಾದಿ. ಸಾಕ್ಷ್ಯಾಧಾರಗಳಿಂದ ಅಪರಾಧ ಸಾಬೀತಾಗದೇ ಯಾರನ್ನು ಬಂಧಿಸಲ್ಪಡುವುದಿಲ್ಲ ಎನ್ನುವುದು ಸತ್ಯ. ಸಮಾಜಘಾತಕರಿಂದ ಸಮಾಜವನ್ನು ರಕ್ಷಿಸುವ ಮತ್ತು ಪಾತಕಿಗಳನ್ನು ಸನ್ಮಾರ್ಗಿಗಳನ್ನಾಗಿ ಮಾರ್ಪಡಿಸುವ ಆಶ್ರಯ ತಾಣವೇ ಕಾರಾಗೃಹ.

ದಿನ ಕಳೆದಂತೆಲ್ಲ ಕಾರಾಗೃಹ ನಿವಾಸಿಗಳಲ್ಲಿ ಯೋಗಾಸಕ್ತಿ ಮೂಡಿತು. ಒತ್ತಡದ ಬದುಕಿನಲ್ಲಿ ನಿದ್ರಾಹೀನತೆಯಿಂದ ಬಳಲುತ್ತಿದ್ದ ಅವರಿಗೆ ಪ್ರಾಣಾಯಾಮ ಅಭ್ಯಾಸ ಹೆಚ್ಚು ಪರಿಣಾಮ ಬೀರಿತು. ಕುಮಾರ್ ಸ್ವಾಮಿಯವರ ಮ್ಯಾಜಿಕ್ ಮತ್ತು ಮನರಂಜನಾ ಆಟಗಳು ಅವರ ಖಿನ್ನತೆಯನ್ನು ಹೋಗಲಾಡಿಸುತ್ತಿತ್ತು. ನಮ್ಮ ದಾರಿ ಕಾಯುವಂತಾದರು. ನಿಧಾನವಾಗಿ ಅವರ ಮುಖದಲ್ಲಿ ನಗು ಮೂಡಲಾರಂಭಿಸಿದಾಗ ಯೋಗ ಕಲಿತದ್ದು ಸಾರ್ಥಕ ಎಂಬ ಭಾವನೆ ಮೂಡಿತು.

ಪ್ರತಿದಿನ ಎರಡು ಗಂಟೆಗಳ ಕಾಲಾವಕಾಶದಲ್ಲಿ ಒಂದುವರೆ ಗಂಟೆ ಯೋಗಾಸನ, ಮನರಂಜನೆ, ಉಳಿದ ಅರ್ಧ ಗಂಟೆ ಸೂರ್ಯನಮಸ್ಕಾರ, ಯೋಗಾಸನದ ಅಭ್ಯಾಸ ಕ್ರಮ, ಪ್ರಯೋಜನಗಳು, ಆರೋಗ್ಯದ ಸಮಸ್ಯೆ ಪರಿಹಾರಗಳು ಹೀಗೆ ಪರಸ್ಪರ ವಿಚಾರ ವಿನಿಮಯ ನಡೆಯುತಿತ್ತು. ಬರುಬರುತ್ತ ಅವರೆಲ್ಲರೂ ವಿಧೇಯ ವಿದ್ಯಾರ್ಥಿಗಳಾದರು. ಜೀವನ ಪ್ರೀತಿ ಹುಟ್ಟಿತು. ತಮ್ಮ ಆಂತರಿಕ ಅನಿಸಿಕೆಯನ್ನು ವ್ಯಕ್ತಪಡಿಸಲು ಪ್ರಯತ್ನಿಸಿದರು.

ಅವರ ಮುಂದಿನ ಕನಸು, ಜೀವನದ ಬಗ್ಗೆ ಅವರಿಗೆ ಇರುವ ಹಂಬಲ ಇವುಗಳನ್ನು ಒಬ್ಬರಿಗಿಂತ ಒಬ್ಬರು ಪರಿಣಾಮಕಾರಿಯಾಗಿ ವಿವರಿಸುತ್ತಿದ್ದರು. ಬಹುತೇಕರ ಜೀವನ ನನ್ನ ಕಣ್ಣಂಚಿನಲ್ಲಿ ನೀರು ಜಿನುಗಿಸಿತ್ತು. ಸುಮಾರು 100ರಷ್ಟು ಬಾಲಕರು ಪೋಕ್ಸೊ ಪ್ರಕರಣದಲ್ಲಿ ಬಂಧಿಯಾಗಿದ್ದರು. ವೃದ್ಧರೊಬ್ಬರು ಟೀಚರಮ್ಮ ಎಂದು ಕಾಲಿಗೆ ಬಿದ್ದಾಗ ಮನಸ್ಸು ಮೌನವಾಗಿ ರೋಧಿಸಿತ್ತು. ನಮಗೆ ಲಭಿಸಿರುವ ಬದುಕಿನ ಮೌಲ್ಯ ತಿಳಿಯಬೇಕಾದರೆ ಬದುಕೇ ಇಲ್ಲದಿರುವ ಇವರನ್ನು ನೋಡಬೇಕು. ಬಂದಿಸಿ ಸ್ವಾತಂತ್ರ್ಯವಿಲ್ಲದ ಇವರನ್ನು ಕಂಡಾಗ ನನಗೆ ಸಿಕ್ಕಿರುವ ಜೀವನ ಸ್ವರ್ಗ ಎನಿಸಿತು.

ತಮ್ಮ ಆಂತರಿಕ ಅನಿಸಿಕೆಯನ್ನು ವ್ಯಕ್ತಪಡಿಸಿರುವ ಪ್ರತಿ ಬಂಧಿನಿವಾಸಿಯು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟು ಉತ್ತಮ ನಾಗರೀಕ ಜೀವನಕ್ಕೆ ಹಾತೊರೆಯುತ್ತಿರುವುದು ವ್ಯಕ್ತವಾಯಿತು. ಶಿಕ್ಷೆ ಅನುಭವಿಸುವುದರೊಂದಿಗೆ ಜೀವನ ಶಿಕ್ಷಣ ಪಡೆಯುತ್ತಿರುವುದು ಬದಲಾವಣೆಯ ಸಂಕೇತ.

ಜೈಲ್‌ನಿಂದ ಹೊರ ಬಂದಾಗ ಮನೆಯವರು, ಸಮಾಜ ಅವರನ್ನು ತಿರಸ್ಕಾರದಿಂದ ನೋಡುವುದನ್ನು ನಿಲ್ಲಿಸುವಂತಾಗಬೇಕು. ಅಪರಾಧಿಯು ಒಬ್ಬ ಮನುಷ್ಯ, ಅವನು ಸುಧಾರಣೆಗೊಂಡು ಉತ್ತಮ ಮಾನವನಾಗಿ, ಸತ್ಪ್ರಜೆಯಾಗಿ, ಸಮಾಜದ ಪ್ರಗತಿಯಲ್ಲಿ ಭಾಗಿಯಾಗುವುದು ವಿಹಿತ. ಅವನಿಗೆ ಜೀವನ ಸುಧಾರಣೆಯ ಅವಕಾಶವನ್ನು ಕಲ್ಪಿಸಿಕೊಡುವುದು ಮನೆಯವರ, ಸಮಾಜದ ಮತ್ತು ಸರ್ಕಾರದ ಕರ್ತವ್ಯ ಎಂಬ ಭಾವನೆ ಪ್ರತಿಯೊಬ್ಬ ಪ್ರಜ್ಞಾವಂತ ನಾಗರೀಕರಿಗೆ ಬರಬೇಕು. ಕಾರಾಗೃಹ ಸುಧಾರಣೆ ಮತ್ತು ಪುನರ್ವಸತಿಗಳ ದ್ಯೋತಕವಾಗಬೇಕು.

ಅವಕಾಶ ಕಲ್ಪಿಸಿ, ಗೌರವಿಸಿದ ಜೈಲ್ ಅಧಿಕಾರಿಗಳಿಗೆ ವಂದಿಸಿ ಬಂಧೀನಿವಾಸಿಗಳಿಗೆ, ಸಿಹಿ ವಿತರಿಸಿದಾಗ ಕಂಬಿಗಳ ಹಿಂದಿನಿಂದ ಕೈಗಳು ಟಾಟಾ ಮಾಡುತ್ತಿದ್ದವು. ಭಾರವಾದ ಮನಸ್ಸಿನಿಂದ ಕಾರ್ಯಕ್ರಮ ಸಂಪನ್ನಗೊಳಿಸಿದೆವು.

## ವಿವಿಧ ಜಿಲ್ಲೆಗಳಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಸ್ವಚ್ಛತಾ ಕಾರ್ಯಕ್ರಮ ಹಾಗೂ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವುದು.


ಬೆಂಗಳೂರು ಉತ್ತರ


ಚಿತ್ರದುರ್ಗ



ದಾವಣಗೆರೆ


ಹಾಸನ


ಕಾರವಾರ


ಕೋಲಾರ


ರಾಮನಗರ



ಉಡುಪಿ

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26